27TH YEAR OF PUBLICATION. PHONE 728 ಬೆಲೆ: ಎರಡಾಣೆ.

ಪ್ರಭಾತ

ಸಂಪುಟ: ೨೭. ಸಂಚಿಕೆ: ೩೫. 8—10—1961 Vol. XXVII. No. 35.

PRABHAT ✻ KANNADA WEEKLY ✻ MANGALORE

ಲೇಖಾಂಕ ೨೫.

ಮಹಾಭಾರತ ಕಥಾಮೃತ

(ಲೇಖಕ: ಶ್ರೀ ಕೊ.ಶ.ಕಾರಂತ, ಬಿ.ಎ.,ಬಿ.ಎಲ್., ಎಡ್ವೊಕೇಟ್, ಮಂಗಳೂರು.)

ಖಾಂಡವವನ ದಹನ

ಒಂದು ದಿನ ಶ್ರೀಕೃಷ್ಣ ಮತ್ತು ಅರ್ಜುನ ಸ ದ್ರೌಪದಿ, ಸುಭದ್ರೆಯರೊಡನೆ ವನ ವಿಹಾರಕ್ಕಾಗಿ ಯಮುನಾತಟಕ್ಕೆ ಹೋಗಿದ್ದರು. ಆ ಭೂಮಿಯು ಉತ್ತಮ ವಿಹಾರ ಪ್ರದೇಶವಾಗಿತ್ತು. ಅಲ್ಲಿ ಇಂದ್ರ ಪುರಕ್ಕೆ ಸಮಾನವಾದ ಒಂದು ದಿವ್ಯ ಭವನವಿತ್ತು. ಅದು ಅಂತಃಪುರದ ಸ್ತ್ರೀಯರೆಲ್ಲರೂ ಜಲಕ್ರೀಡೆಯಾಡುವ ಸ್ಥಳವಾಗಿತ್ತು. ಅಲ್ಲಿದ್ದ ಸ್ತ್ರೀಯರಿಗೆ ದ್ರೌಪದಿ ಮತ್ತು ಸುಭದ್ರೆ ಇವರು ವಸ್ತ್ರಾಭರಣಗಳನ್ನು ದಾನವಿತ್ತರು. ಇವರೆಲ್ಲರೂ ಕ್ರಿಡಾವಿಹಾರದ ಆನಂದಮಯ ಉತ್ಸವದಲ್ಲಿ ಕೆಲವು ದಿನ ಕಳೆದರು.

ಒಂದುದಿನ ಪ್ರಾತಃಕಾಲ ಸಮಯ ನಿತ್ಯಕರ್ಮಾದಿಗಳನ್ನು ನೆರವೇರಿಸಿ ಧನಂಜಯ ಮತ್ತು ವಾಸುದೇವ ಇವರಿಬ್ಬರು ಕಾತುಕಥೆ ಬೆಳೆಯಿಸುತ್ತಿದ್ದಾಗ ಸುವರ್ಣ ಸಮಾನ ಕಾಂತಿಯಿರುವ ಓರ್ವ ಬ್ರಾಹ್ಮಣನು ಪ್ರವೇಶಿಸಿದನು. ಭಗವಾನ್ ಶ್ರೀಕೃಷ್ಣನು ಮತ್ತು ಅರ್ಜುನನು ಎದ್ದು ಆ ಬ್ರಾಹ್ಮಣನನ್ನು ಅಭಿವಂದಿಸಿದರು.

"ನಾನು ಬಹುಭೋಕ್ತ ವಿಪ್ರನಾಗಿರುವೆನು. ಶ್ರೀಕೃಷ್ಣ, ಅರ್ಜುನನ್ನು ಇಂದಿನ ಭಿಕ್ಷೆಯನ್ನು ಬೇಡುತ್ತೇನೆ. ಪೂರ್ಣ ಭೋಜನವನ್ನಿತ್ತು ನನ್ನನ್ನು ಸಂತೃಪ್ತಿಪಡಿಸಬೇಕೆಂದು ಪ್ರಾರ್ಥಿಸುತ್ತೇನೆ" ಎಂದನು.

"ವಿಪ್ರವರ್ಯ! ನಿನಗಾವ ವಿಧದ ಅನ್ನದಲ್ಲಿ ಪ್ರೀತಿಯಿದೆ. ನಾವಿಬ್ಬರೂ ಅದರ ಪ್ರಾಪ್ತಿಗಾಗಿ ಪ್ರಯತ್ನ ಮಾಡುವೆವು" ಎಂದು ಶ್ರೀಕೃಷ್ಣನು ವಿಚಾರಿಸಿದನು.

"ವೀರರೇ! ನನ್ನನ್ನು ಅಗ್ನಿ ಎಂದು ಭಾವಿಸಿ, ನನಗೆ ಅನುರೂಪವಾದ ಅನ್ನವನ್ನು ಅನುಗ್ರಹಿಸಿರಿ." ಇಲ್ಲಿಯೇ ಸಮೀಪ ಇಂದ್ರನಿಗೆ ಪ್ರಿಯವಾದ ಖಾಂಡವ ವನವಿದೆ. ಮಹೇಂದ್ರನಿಂದ ರಕ್ಷಿತವಾಗಿರುವುದರಿಂದ ಇಷ್ಟರವರೆಗೆ ಅದನ್ನು ದಹಿಸಲು ನನಿಂದ ಸಾಧ್ಯವಾಗಲಿಲ್ಲ. ಆ ವನದಲ್ಲಿ ದೇವೇಂದ್ರನ ಸಖನಾದ ತಕ್ಷಕ ಮತ್ತು ಅವನ ಪರಿವಾರ ಇವೆ. ಆದ್ದರಿಂದ ಮಹೇಂದ್ರನು ಅವರನ್ನು ಸರ್ವದಾ ರಕ್ಷಿಸುತ್ತಿದ್ದಾನೆ. ನೀವು ಅಸ್ತ್ರವಿದ್ಯಾನಿಪುಣರಾದ್ದರಿಂದ ನಿಮ್ಮಿಂದ ಮಾತ್ರ ಸಾಧ್ಯವೆಂದು ಈ ಖಾಂಡವ ವನವನ್ನು ಅನ್ನವಾಗಿ ಭಿಕ್ಷೆ ಕೇಳುತ್ತಿದ್ದೇನೆ."

ಬ್ರಾಹ್ಮಣ ವೇಷಧಾರಿಯಾದ ಅಗ್ನಿದೇವನ ಈ ಮಾತನ್ನು ಕೇಳಿ "ಮಹಾಭಾಗ! ಸಹಸ್ರಯಜ್ಞಗಳಲ್ಲಿ ಘೃತಧಾರೆ ಆಹುತಿಯನ್ನು ಅರ್ಪಿಸುತ್ತಿದ್ದಾರೆ. ಘೃತಪೃಷ್ಠನೆಂದು ನಿನ್ನ ನಾಮವಾಗಿಬಿಟ್ಟಿದೆ. ಹವ್ಯವಾಹನ! ಇವುಗಳಿಂದ ನಿನಗೆ ಮಾಂದ್ಯವಾಗಿದೆಯೇ? ನೀನು ಪೂರ್ವವತ್ ಸ್ವಸ್ಥನಾಗುವಿ! ವಿಭಾವಸೋ! ಖಾಂಡವ ವನವನ್ನು ಪ್ರವೇಶಿಸಿ ನಿನ್ನ ಹಸಿವೆಯನ್ನು ತೃಪ್ತಿಮಾಡಿಕೊಳ್ಳುವನಾಗು" ಎಂದನು.

ಆ ಮಾತಿಗೆ ಅರ್ಜುನನು ಈ ಪ್ರಕಾರ ನಿವೇದಿಸಿದನು. "ಭಗವಾನ್ ನನ್ನ ಬಳಿ ದಿವ್ಯರಥವಿರುವುದಿಲ್ಲ. ಮೇಘ ಸಮಾನ ವೇಗದಿರುವ ಶ್ವೇತಾಶ್ವಗಳು ಮತ್ತು ಸೂರ್ಯ ಸಮಾನ ತೇಜಸ್ವಿರುವ ರಥವನ್ನು, ದಿವ್ಯ ಅಸ್ತ್ರವನ್ನು ಅನುಗ್ರಹಿಸಬೇಕಾಗಿ ಪ್ರಾರ್ಥಿಸುತ್ತೇನೆ"

ಅರ್ಜುನನ ಈ ಪ್ರಾರ್ಥನೆಯನ್ನು ಕೇಳಿ ಹುತಾಶನನು ಲೋಕಪಾಲ ವರುಣದೇವನ ಕುರಿತು ಧ್ಯಾನಮಾಡಿದನು. "ವರುಣದೇವ! ಅರ್ಜುನನಿಗೆ ಗಾಂಡೀವ ಧನಸ್ಸನ್ನು ಅಕ್ಷಯ ಬತ್ತಳಿಕೆಯನ್ನು ಕಪಿಧ್ವಜವಿರುವ ರಥವನ್ನು ಕರುಣಿಸು." ಇಂದು ಶ್ರೀಕೃಷ್ಣನು ತನ್ನ ಚಕ್ರದಿಂದಲೂ ಅರ್ಜುನನು ಗಾಂಡೀವಾಸ್ತ್ರದಿಂದ ನನ್ನ ಕಾರ್ಯವನ್ನು ನೆರವೇರಿಸುವರು" ಎಂದು ಕೋರಿದನು.

ವರುಣನು ಈ ಅಭೀಷ್ಟನು ಕೂಡಲೇ ಅನುಗ್ರಹಿಸಿದನು. ಇವನ್ನು ಸ್ವೀಕರಿಸಿ ಪಾರ್ಥನು ಬಹು ಪ್ರಸನ್ನನಾದನು. ಆ ನಂತರ ಅಗ್ನಿಯು ತನ್ನ ತೇಜೋಮಯ ರೂಪದಿಂದ ಪ್ರಕಟನಾಗಿ ಶ್ರೀಕೃಷ್ಣನಿಗೆ ಒಂದು ಚಕ್ರವನ್ನು ಕೊಟ್ಟನು. ಏಳು ನಾಲಗೆಗಳಿಂದ ತನ್ನ ಘೋರ ರೂಪದಿಂದ ಅಗ್ನಿದೇವನು ಖಾಂಡವ ವನವನ್ನು ಪ್ರವೇಶಿಸಿ ಮಹಾಪ್ರಳಯ ಕಾಲದಂತೆ ರೂಪವನ್ನು ತಾಳಿದನು.

ಆ ಖಾಂಡವ ವನದಲ್ಲಿ ಸಕಲ ಪ್ರಾಣಿಗಳು ಪಕ್ಷಿಗಳು ಅಗ್ನಿದೇವನಿಗೆ ಆಹುತಿಯಾದವು ಜ್ವಾಲೆಯ ಉರಿಯನ್ನು ಸಹಿಸಲಾರದೆ ಹಾರಿ ಹೋಗುವ ಪಕ್ಷಿಗಳನ್ನು ಪ್ರಾಣಿಗಳನ್ನು ಸಂಹರಿಸಿ ಅಗ್ನಿದೇವನಿಗೆ ಅರ್ಪಿಸುತ್ತಿದ್ದನು. ಇದನ್ನು ನೋಡಿ ಇಂದ್ರನು ಅತ್ಯಂತ ಕೋಪಗೊಂಡು, ಕುಂಭದ್ರೋಣದ ಮಳೆಯನ್ನು ಸುರಿಸುವಂತೆ ಮೇಘರಾಜನಿಗೆ ಆಜ್ಞೆಮಾಡಿದನು. ಅರ್ಜುನನು ದಿವ್ಯಾಸ್ತ್ರಗಳನ್ನು ಹೂಡಿ ಮಳೆಯು ಆ ಖಾಂಡವ ವನದ ಮೇಲೆ ಬೀಳದಂತೆ ತಡೆಗಟ್ಟಿದನು.

ಆ ಸಮಯ ನಾಗರಾಜ ತಕ್ಷಕನು ಖಾಂಡವ ವನದಲ್ಲಿ ಇರಲಿಲ್ಲ. ಅವನ ಮಗನಾದ ಅಶ್ವಸೇನ ಅವನ ಪತ್ನಿ ಬಳಗದವರೆಲ್ಲರೂ ಇದ್ದರು ಅಶ್ವಸೇನನು ಅಗ್ನಿಯಿಂದ ತಪ್ಪಿಸಿಕೊಳ್ಳಲು ಬಹಳ ಪ್ರಯತ್ನಮಾಡಿದನು. ತಾಯಿಯಾದ ಸರ್ಪಿಣಿಯೂ ಗಗನಕ್ಕೆ ಚಿಗಿದಳು ಆದರೆ ಅರ್ಜುನನ ತೀಕ್ಷ್ಣಬಾಣವು ಆ ಸರ್ಪಿಣಿಯ ತಲೆಯನ್ನು ಹಾರಿಸಿತು. ಶಚೀಪತಿಯಾದ ಇಂದ್ರನು ನೋಡಿ ಸಹಿಸಲಾರದೆ ಹೋದನು. ಭಯಂಕರವಾದ ಅಂಧಕಾರವನ್ನು ಕವಿದನು. ಆಗ ತಕ್ಷಕನ ಪುತ್ರನಾದ ಅಶ್ವಸೇನನು ಈ ಸಂಕಟದಿಂದ ತಪ್ಪಿಸಿಕೊಂಡನು. ಇದನ್ನು ತಿಳಿದ ಅರ್ಜುನನು ಇಂದ್ರನ ಮೇಲೆ ಬಾಣವನ್ನು ಪ್ರಯೋಗಮಾಡಬೇಕಾಯಿತು. ಇವರೊಳಗೆ ಭಯಂಕರ ಸಮರವು ನಡೆಯಿತು. ಅರ್ಜುನನು ದಿವ್ಯವಾದ ಐಂದ್ರಾಸ್ತ್ರವನ್ನು ಬಿಟ್ಟು ಆಕಾಶವನ್ನು ಆಚ್ಛಾದಿಸಿಬಿಟ್ಟನು. ಆಗ ವಾಯುವಿನ ಪ್ರಚಂಡ ಪ್ರವಾಹಕ್ಕೆ ಆರಂಭವಾಯಿತು. ವರ್ಷವನ್ನು ಸುರಿಸುವುದಕ್ಕಾಗಿ ಮೇಘರಾಶಿ ತಿರುಗಿ ಉತ್ಪನ್ನವಾದವು. ಅರ್ಜುನನು ವಾಯುವ್ಯ ಎಂಬ ಅಸ್ತ್ರವನ್ನು ಅಭಿಮಂತ್ರಿಸಿ ಪ್ರಯೋಗಮಾಡಿದನು. ಎಲ್ಲಾ ಮೇಘರಾಶಿಗಳು ನಷ್ಟವಾಗಿಬಿಟ್ಟವು.

ಆಗ ದೈತ್ಯರು ನಾಗರು ಗರ್ಜಿಸುತ್ತ ಅರ್ಜುನನ ಮೇಲೆ ಮುತ್ತಿದರು. ಶ್ರೀಕೃಷ್ಣನು ಈ ದೈತ್ಯದಾನವರನ್ನೆಲ್ಲಾ ತನ್ನ ಚಕ್ರದಿಂದ ಸಂಹಾರಮಾಡಿದನು. ಆಗ ಶ್ವೇತವಾದ ಐರಾವತವೆಂಬ ಆನೆಯನ್ನೇರಿ ಇಂದ್ರನು ಸ್ವತಃ ಯುದ್ಧಕ್ಕೆ ಧಾವಿಸಿಬಂದನು. ವರುಣ, ರುದ್ರ, ವಸು, ಮರುದ್ಗಣಗಳು, ವಿಶ್ವದೇವ, ಸಾಧ್ಯರಣ ಮೊದಲಾದವರು ಮಹೇಂದ್ರನ ಬೆಂಬಲಕ್ಕಾಗಿ ಬಂದರು. ಪ್ರಳಯಕಾಲದಂತೆ ಘೋರ ಸಂಗ್ರಾಮಕ್ಕೆ ಆರಂಭವಾಯಿತು.

ಅರ್ಜುನನ ನಾಶಕ್ಕಾಗಿ ಇಂದ್ರನು ಒಂದು ಮಹಾಪರ್ವತವನ್ನು ಕಿತ್ತೊಗೆದನು. ಅರ್ಜುನನು ಇದನ್ನು ಮಾರ್ಗಮಧ್ಯದಲ್ಲಿಯೇ ಬಾಣ ಪ್ರಯೋಗಿಸಿ ಸಹಸ್ರಾರು ಭಾಗವಿಭಾಗವಾಗಿಮಾಡಿದನು. ಇಂದ್ರಾದಿ ದೇವತೆಗಳ ಸಾಹಸವು ಶ್ರೀಕೃಷ್ಣಾರ್ಜುನರ ಮುಂದೆ ಸಾಗದೆ ಪರಾಜಿತರಾದರು.

ಖಾಂಡವ ವನದಹನದಲ್ಲಿ ಸಂಪೂರ್ಣ ವನಜಂತುಗಳು ಅಗ್ನಿಯಲ್ಲಿ ಧ್ವಂಸವಾದವು. ಆಗ ತಕ್ಷಕ ನಿವಾಸಸ್ಥಾನದಿಂದ ಮಯನೆಂಬ ಅಸುರನು ತಪ್ಪಿಸಿಕೊಂಡು ಹೋಗುವುದು ಶ್ರೀಕೃಷ್ಣನ ದೃಷ್ಟಿಗೆ ಗೋಚರವಾಯಿತು. ಅಗ್ನಿದೇವನು ಅವನನ್ನು ಭಸ್ಮಮಾಡಬೇಕೆಂದು ತನ್ನ ದೀರ್ಘವಾದ ಜ್ವಾಲೆಗಳನ್ನು ನೀಡಿದನು "ಅರ್ಜುನ! ನನ್ನನ್ನು ರಕ್ಷಿಸು! ರಕ್ಷಿಸು!" ಎಂದು ಆ ಮಯಾಸುರನು ಮೊರೆಯಿಟ್ಟನು. ದೀನರ ಜೀವದಾನಿಯಾದ ಅರ್ಜುನನು 'ಭಯಪಡಬೇಡ' ಎಂದು ಪ್ರತಿನುಡಿದನು.

ಈ ಪ್ರಕಾರವಾಗಿ ಅಗ್ನಿದೇವನು ಪ್ರಜ್ವಲಿಸುತ್ತ ಪಂಚದಶ (ಹದಿನೈದು) ದಿನಗಳವರೆಗೆ ಖಾಂಡವ ವನವನ್ನು ದಹಿಸಿದನು. ಆದರೆ ಅಶ್ವಸೇನನು ಮಯಾಸುರ ಮತ್ತು ಶಾಂರ್ಗಕ ಎಂಬ ನಾಲ್ಕು ಪಕ್ಷಿಗಳು ಇವು ಮಾತ್ರ ಅಗ್ನಿಗೆ ಆಹುತಿಯಾಗಲಿಲ್ಲ. ಖಾಂಡವ ವನದ ದಹನದಿಂದ ಅಗ್ನಿದೇವನು ಸಂತೃಪ್ತನಾಗಿ ಶ್ರೀಕೃಷ್ಣಾರ್ಜುನರನ್ನು ಅಭಿವಂದಿಸಿ ಸ್ವಸ್ಥಾನಕ್ಕೆ ತೆರಳಿದನು.

ಇತಿ, ಆದಿಪರ್ವದ ಸಮಾಪ್ತಿಯು.

—೦—

ಮಂಗಳೂರು ಬಂದರಿನ ಅಭಿವೃದ್ಧಿ ಕಾರ್ಯ

ತೃತೀಯ ಯೋಜನೆ ಕಾಲದಲ್ಲಿ ಕೈಗೊಳ್ಳಲಾಗುವ ಹಿರಿಯ ಬಂದರುಗಳ ಅಭಿವೃದ್ಧಿ ಕಾರ್ಯಕ್ರಮಗಳನ್ನು ಈಚೆಗೆ ಎರ್ನಾಕುಲಂನಲ್ಲಿ ನಡೆದ ರಾಷ್ಟ್ರೀಯ ಬಂದರು ಮಂಡಲಿ ಸಭೆಯಲ್ಲಿ ಚರ್ಚಿಸಲಾಯಿತು. ಕೇಂದ್ರ ಸಾಗಾಣಿಕೆ ಹಾಗೂ ಸಂಪರ್ಕ ಸಾಧನಗಳ ಶಾಖೆಮಂತ್ರಿ ಡಾ| ಪಿ. ಸುಬ್ಬರಾಯನ್‌ರವರು ಸಭೆಯ ಅಧ್ಯಕ್ಷತೆ ವಹಿಸಿದ್ದರು.

ತೃತೀಯ ಯೋಜನೆಯಲ್ಲಿ ಬಂದರುಗಳ ಅಭಿವೃದ್ಧಿಗಾಗಿ 115 ಕೋಟಿ ರೂ.ಗಳನ್ನು ವೆಚ್ಚಮಾಡುವ ಅಂದಾಜು ಹಾಕಲಾಗಿದೆ. ಈ ಪೈಕಿ 80 ಕೋಟಿ ರೂ.ಗಳು ಪ್ರಮುಖ ಬಂದರುಗಳ ಅಭಿವೃದ್ಧಿಗೆ ಸಂಬಂಧಪಟ್ಟಂತೆಯೇ ವಿನಿಯೋಗವಾಗುತ್ತವೆ.

ಮಂಗಳೂರು, ಮತ್ತು ತುತ್ತುಕೂಡಿ ಈ ಎರಡು ಹೊಸ ಹಿರಿಯ ಬಂದರುಗಳ ಅಭಿವೃದ್ಧಿಗೆ 10 ಕೋಟಿ ರೂ.ಗಳು ಖರ್ಚಾಗುತ್ತವೆ. ಮಂಗಳೂರು ಬಂದರಿನ ಅಭಿವೃದ್ಧಿಗೆ ಹೆಚ್ಚು ಹಣ ಒದಗಿಸಬೇಕೆಂದು ಮೈಸೂರು ರಾಜ್ಯ ಸರಕಾರ ಕೇಳಿರುವ ವಿಷಯ ಸಹ ಸಭೆಯಲ್ಲಿ ಪರಿಶೀಲನೆಗೆ ಬಂತು. ಬಂದರು ಅಭಿವೃದ್ಧಿ ಕಾರ್ಯ ನಿರೀಕ್ಷೆಗೂ ಮೀರಿ ಬಿರುಸಾಗಿ ನಡೆದರೆ ಮತ್ತು ಈ ಕಾರ್ಯ ಪ್ರಗತಿ ಕುಂಠಿತವಾಗದಂತೆ ನೋಡಿಕೊಳ್ಳುವ ದೃಷ್ಟಿಯಿಂದ ತೃತೀಯ ಯೋಜನೆಯಲ್ಲಿ ಒದಗಿಸಲಾಗಿರುವ ಹಣಕ್ಕಿಂತ ಹೆಚ್ಚು ಹಣ ಬೇಕೆನಿಸಿದರೆ ಸೂಕ್ತ ಸಮಯದಲ್ಲಿ ಈ ಪ್ರಶ್ನೆಯನ್ನು ಯೋಜನಾ ಆಯೋಗದ ಮುಂದೆ ಎತ್ತಬಹುದೆಂದು ಸಭೆಯಲ್ಲಿ ಅಭಿಪ್ರಾಯಪಡಲಾಯಿತು.

ಮಂಗಳೂರಿನಲ್ಲಿ ಬಂದರು ನಿರ್ಮಾಣ ಕಾರ್ಯ ನಡೆಯುವ ಕಾರ್ಯಕ್ರಮಕ್ಕೆ ಹೊಂದಿಕೊಂಡೇ ಮಂಗಳೂರು-ಹಾಸನ ರೈಲ್ವೆ ದಾರಿ ನಿರ್ಮಾಣ ಕಾರ್ಯವೂ ನಡೆಯಬೇಕು ಎಂದು ಮಂಡಲಿಯು ಸೂಚಿಸಿದೆ. — —

ಪ್ರಭಾತ

ಸಂಪುಟ: ೨೭. ಸಂಚಿಕೆ: ೩೫.   8—10—1961   Vol. XXVII. No. 35.

ಗೋವೆ: ಹೊಸ ಧೋರಣೆ

ಆರು ವರ್ಷಗಳ ಹಿಂದೆ ಭಾರತ ಸರಕಾರವು, ಗೋವೆಗೆ ಹಣ ರವಾನೆಮಾಡುವುದರ ಮೇಲೆ ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು, ಕಳೆದವಾರ ರದ್ದುಗೊಳಿಸಿ, ಭಾರತದೊಳಗಿನವರು ಗೋವೆಯೊಳಗಿನ ತಮ್ಮ ಸಂಬಂಧಿಕರಿಗೆ ದಿನಕ್ಕೆ ಮೂವತ್ತು ರೂಪಾಯಿಯ ಮಿತಿಗೊಳಪಟ್ಟು ಹಣವನ್ನು ರವಾನಿಸಬಹುದೆಂದು ಆಜ್ಞೆ ಹೊರಡಿಸಲು ನಿರ್ಧರಿಸಿದುದು— ಗೋವೆಯ ವಿಷಯವಾಗಿ ಸರಕಾರದ ಧೋರಣೆಯು, ಹಿಂದಿನ ಪ್ರಮಾದಗಳನ್ನು ತಿದ್ದುವ ದಿಸೆಯಲ್ಲಿ ರೂಪುಗೊಳ್ಳುತ್ತಿದೆಯೆಂಬುದನ್ನು ಸೂಚಿಸುತ್ತಿದೆ.

ಗೋವೆಗೆ ಪೂರ್ಣ ಆರ್ಥಿಕ ಬಹಿಷ್ಕಾರವನ್ನು ಹಾಕಿದರೆ, ಅಲ್ಲಿಯ ಪರಿಸ್ಥಿತಿಯು ಕೆಟ್ಟು ಸಾಲಝಾರ್ ಆಡಳಿತವು ದಿಗಿಲುಗೊಂಡು, ತನ್ನ ವಸಾಹತನ್ನು ಬಿಟ್ಟುಬಿಡುವುದೆಂದು ಈ ಮೊದಲು ಭಾವಿಸಿದ್ದು, ಇಷ್ಟು ವರ್ಷಗಳ ಅನುಭವದಿಂದ ತಪ್ಪು ಎಂದು ಸರಕಾರಕ್ಕೆ ಮನವರಿಕೆಯಾಗಿದ್ದಿರಬೇಕು. ಕಳೆದ ಆರು ವರ್ಷಗಳಲ್ಲಿ, ಗೋವೆಯ ಸ್ಥಿತಿಯು ಇನ್ನಿಷ್ಟು ಸುಧಾರಿಸಿದೆಯೆಂದು ಪೋರ್ಚುಗಲು ಹೆಮ್ಮೆಯಿಂದ ಹೇಳುತ್ತ ಬಂದಿದೆ. ತಮ್ಮ ಜೀವನಕ್ಕಾಗಿ ಭಾರತದಲ್ಲಿನ ತಮ್ಮವರ ಹಣದ ಮೇಲೇ ಅವಲಂಬಿಸಿರುವ ಅಲ್ಲಿಯ (ಗೋವೆಯ) ಹಲವು ಕುಟುಂಬಗಳಿಗೆ ಮಾತ್ರ ಅವರ್ಣನೀಯ ಸಂಕಷ್ಟಗಳ ಅನುಭವವಾಯಿತು. ಈಗ ಆ ನೋವೊಂದನ್ನು ಸರಕಾರವು ಶಮನಿಸುತ್ತಿದೆ.

ಹಣ ರವಾನೆಯ ಮೇಲಿನ ನಿರ್ಬಂಧವು ಗೋವೆಯವರಿಗೆ ಸಂಕಷ್ಟಗಳನ್ನು ತಂದೊಡ್ಡಿದ್ದರೆ, ಭಾರತದಲ್ಲಿರುವ ಗೋವೆಯವರಿಗೆ ಗೋವೆಗೆ ಪ್ರಯಾಣಿಸಲು ತಂದೊಡ್ಡಿದ ನಿರ್ಬಂಧಗಳೂ ಸರ್ವಸಾಮಾನ್ಯ ಅನಪೇಕ್ಷಣೀಯವಾಗಿ ಕಂಡಿವೆ. 1954ರಿಂದ ಗೋವೆಗೆ ಸ್ಟೀಮರ್ ಸರ್ವೀಸು ನಿಲ್ಲಿಸಲ್ಪಟ್ಟಿದೆ. ಗೋವಾ-ಭಾರತ ಸಂಬಂಧವು ವೈಷಮ್ಯದ್ದಾಗಿಯೇ ಉಳಿದಿದೆ. ಸದ್ಯಃ ಹಣವನ್ನು ಗೋವಾ ನಾಣ್ಯಗಳಿಗೆ ಪರಿವರ್ತಿಸಿ ತೆರಲು ಗೋವಾ ಸರಕಾರವು ಒಪ್ಪಿದ್ದಂತೆಯೇ— ಈಗ ಸ್ಟೀಮರ್ ಸರ್ವಿಸಿನ ಸಂಬಂಧಕ್ಕೂ, ಬ್ರೆಝಿಲ್ ಸರಕಾರದ ರಾಯಭಾರದಿಂದ ಒಪ್ಪುವುದು ಸಾಧ್ಯವಿದೆ. ಈ ಸಂಬಂಧದಿಂದ ಭಾರತ ಸರಕಾರವು ತನ್ನ ಗೋವಾ ಧೋರಣೆಯಲ್ಲಿ ಪೂರ್ಣ ಅಪಜಯ ಪಡೆದಂತಾಯಿತೆಂಬ ಅಭಿಪ್ರಾಯವುಂಟಾಗುವುದು ನಿಜ. ಆದರೆ, ಇಷ್ಟು ವರ್ಷವೂ ಆ ಅಪಜಯವು ಅಲ್ಲೇ ಇತ್ತು; ಈಗ ಅದನ್ನು ತಡವಾಗಿಯಾದರೂ ಒಪ್ಪುವುದರಿಂದ ಹಾನಿಯಿರಲಾರದು. ಗೋವೆಯ ವಿಮೋಚನೆಯು ಶಾಂತಿಯಿಂದ ತೀರ್ಮಾನವಾಗಲಾರದೆಂದು, ಕಳೆದ ಆರು ವರ್ಷಗಳು ತಿಳಿಸಿವೆ. ಮುಂದಿನ ಧೋರಣೆ ನಿಶ್ಚಯಿಸಲ್ಪಡುವ ತನಕ, ಈ ಮೊದಲಿನ ಅವೆರಡು ನಿರ್ಬಂಧಗಳನ್ನು ಹೋಗಲಾಡಿಸಿ, ಗೋವೆಯ ನಿವಾಸಿಗಳಲ್ಲಿ ಸದ್ಭಾವನೆಯುಂಟುಮಾಡುವುದು ಉಚಿತವೆಂದು ತೋರುತ್ತದೆ.

——

ಡಿಸೀಲ್ ಟೇಂಕ್ ಸ್ಫೋಟನದಿಂದ ಒಂದು ಮೃತ್ಯು; ಇಬ್ಬರಿಗೆ ಜಖಂ

ಸಿ. ಪಿ. ಸಿ. ಕಂಪೆನಿಯ ಗೇರೆಜಿನಲ್ಲಿ ದುರ್ಘಟನೆ

ಸೋರುತ್ತಿದ್ದ ಡಿಸೀಲ್ ಟೇಂಕಿನ ದುರಸ್ತಿಗೆಂದು, ತಾ. 5—10—61ರ ಬೆಳಿಗ್ಗೆ ಬಸ್ಸನ್ನು ಕೆನರಾ ಪಬ್ಲಿಕ್ ಕನ್ವೇಯನ್ಸ್ ಕಂಪೆನಿಯ ಗೇರೇಜಿಗೆ ತಂದು, ಟೇಂಕನ್ನು ಬರಿದುಗೊಳಿಸಿ, ಬಿರುಕುಂಟಾದ ಸ್ಥಳದಲ್ಲಿ ಬೆಸುಗೆ ಹಾಕಲು ಕಾಯಿಸುವಾಗ, ಒಳಗೆ ಉಳಿದಿದ್ದ ಅಲ್ಪಸ್ವಲ್ಪ ಡಿಸೀಲ್ ತೈಲಕ್ಕೆ ಬೆಂಕಿ ಹತ್ತಿ, ಟೇಂಕ್ ಒಡೆದು,—ಬೆಸುಗೆ ಕೆಲಸದಲ್ಲಿದ್ದ ಎಬ್ನೇಝರ್ ಕರ್ಕಡ (45 ವರ್ಷ) ಎಂಬವರ ಮೈಗೂ, ಬಳಿಯಲ್ಲಿದ್ದ ಕೊರಗ (25 ವರ್ಷ) ಮತ್ತು ಕುಂಞಿರಾಮನ್ (40 ವರ್ಷ) ಇವರ ಮೈಗೂ ಬೆಂಕಿಹತ್ತಿ, ಮೂವರನ್ನೂ ಮೋದಂಡಾವಸ್ಥೆಯಲ್ಲಿ ಆಸ್ಪತ್ರೆಗೊಯ್ಯಲಾಯಿತು.

ಕರ್ಕಡರವರು ಮರುದಿನ, ಆಸ್ಪತ್ರೆಯಲ್ಲಿ, ಯಾವ ಚಿಕಿತ್ಸೆಯೂ ಪ್ರಯೋಜನಕಾರಿಯಾಗದೆ ಮರಣಹೊಂದಿದರು. ಇನ್ನಿಬ್ಬರು, ಶುಶ್ರೂಷೆ ಹೊಂದುತಿದ್ದಾರೆ.

——

ಮಂಗಳೂರು ನಗರಸಭೆ

- ಮಂಗಳೂರಲ್ಲಿ ಮೆಡಿಕಲ್ ಕೊಲೇಜ್ ಬಗ್ಗೆ ಒತ್ತಾಯ.
- ವಧಾಖಾನೆಯ ವರ್ಗಾವಣೆಗೆ ಠರಾವು.

ಮೈಸೂರು ರಾಜ್ಯಕ್ಕೆ ಮಂಜೂರಾಗಿರುವ ಎರಡು ಮೆಡಿಕಲ್ ಕೊಲೇಜುಗಳಲ್ಲಿ ಒಂದನ್ನು ಮಂಗಳೂರಲ್ಲೆ ಸ್ಥಾಪಿಸಬೇಕೆಂದು ರಾಜ್ಯ ಸರಕಾರವನ್ನು ಒತ್ತಾಯಿಸುವ ಠರಾವನ್ನು, ಶ್ರೀ| ಎಸ್. ಗೋಪಾಲ ಸಾಲಿನ್ಸರು (ಸ್ವತಂತ್ರ) ಮೊನ್ನೆ ಶುಕ್ರವಾರ ಸಾಯಂಕಾಲ ನಗರ ಸಭಾಧಿಪತಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರ ಅಧ್ಯಕ್ಷತೆಯಲ್ಲಿ ಸೇರಿದ ನಗರ ಸಭೆಯ ಅಧಿವೇಶನದಲ್ಲಿ ಮಂಡಿಸಿದುದು, ಸರ್ವಾನುಮತಿಯಿಂದ ಸ್ವೀಕೃತವಾಯಿತು.

ನಗರಸಭೆಯಲ್ಲಿನ ಕೊಂಗ್ರೆಸ್ ಪಕ್ಷದ ಮುಖಂಡ ಶ್ರೀ| ಕೆ. ವಿಶ್ವನಾಥ ಕಾಮತರವರು ಈ ವಿಷಯದಲ್ಲಿ ಮಾತಾಡುತ್ತ, ಇಂಥ ವಿಷಯಗಳಲ್ಲಿ ಅವಸರವಾಗಿ ನಿರ್ಧಾರಮಾಡುವುದುಚಿತವಲ್ಲವೆಂದೂ, ಈ ವಿಷಯದ ಮೇಲೆ ಕೂಲಂಕಷ ಚರ್ಚೆ ನಡೆಸಿ ವರದಿಯೊಪ್ಪಿಸಲು ನಗರಸಭೆಯ ಶಿಕ್ಷಣಸಮಿತಿಗೊಪ್ಪಿಸಬೇಕೆಂದೂ ಅಭಿಪ್ರಾಯಪಟ್ಟರು. ಕಸ್ತೂರ್‌ಬಾ ಮೆಡಿಕಲ್ ಕೊಲೇಜಿನ ವಿದ್ಯಾರ್ಥಿಗಳು ಈಗ ಮಂಗಳೂರು ಸರಕಾರೀ ಆಸ್ಪತ್ರೆಯ ಸೌಲಭ್ಯಗಳನ್ನು ಹೊಂದುತಿದ್ದಾರೆ; ನಾವು ಈ ಠರಾವುಮಾಡುವ ಮೊದಲು— ಇದರಿಂದೇಳಬಹುದಾದ ಸಮಸ್ಯೆಗಳಾವುವೆಂಬುದನ್ನು ಕೂಲಂಕಷ ವಿಮರ್ಶಿಸಬೇಕು ಎಂದು ಶ್ರೀ| ಪಿ. ಅಚ್ಯುತಪ್ರಭುಗಳವರು (ಕೊಂ.) ಹೇಳಿದರು. ಕಸ್ತೂರ್‌ಬಾ ಮೆಡಿಕಲ್ ಕೊಲೇಜಿನವರು ಮಣಿಪಾಲದಲ್ಲಿ ಸಾವಿರ ಮಂಚಗಳ ಆಸ್ಪತ್ರೆ ರಚಿಸುತ್ತಿರುವರು; ಈ ಕೊಲೇಜನ್ನು ಪೂರ್ಣವಾಗಿ ಅಲ್ಲಿಗೇ ವರ್ಗಾಯಿಸುವ ಸಂಭವವಿದೆ, ಆದುದರಿಂದ, ಮಂಗಳೂರಿಗೆಂದು ಮಂಜೂರಾಗಿದ್ದು—ಕೆಲವೊಂದು ವಾದ-ವಿವಾದ ಕಾರಣದಿಂದ ಇನ್ನೂ ತೆರೆಯಲ್ಪಡಲು ಉಳಿದಿರುವ ಸರಕಾರೀ ಮೆಡಿಕಲ್ ಕೊಲೇಜನ್ನು ಮಂಗಳೂರಲ್ಲೇ ತೆರೆಯಬೇಕು—ಎಂಬುದಾಗಿ, ಶ್ರೀ| ಕೆ. ಮೋನಪ್ಪ ಶೆಟ್ಟಿಯವರು (ಕಮ್ಯೂ) ವಾದಿಸಿದರು.

ತುಸುಹೊತ್ತು ಈ ವಿಷಯದ ಮೇಲೆ ಚರ್ಚೆ ನಡೆದು, ಆ ಮೇಲೆ ನಗರಸಭಾಧಿಪತಿಗಳು ಸೂಚಿಸಿದಂತೆ—"ಕಸ್ತೂರ್‌ಬಾ ಮೆಡಿಕಲ್ ಕೊಲೇಜಿನವರಿಗೆ ದೊರೆಯುತ್ತಿರುವ ಸೌಲಭ್ಯಗಳಿಗಾತಂಕವಾಗದಂತೆ" ಸರಕಾರೀ ಮೆಡಿಕಲ್ ಕೊಲೇಜನ್ನು ಮಂಗಳೂರಲ್ಲಿ ತೆರೆಯಬೇಕೆಂಬ ತಿದ್ದುಪಡಿಯೊಂದಿಗೆ ಠರಾವು ಸರ್ವಾನುಮತಿಯಿಂದ ಮಂಜೂರಾಯಿತು.

ವಧಾಖಾನೆಯನ್ನು ನಿರಾಕ್ಷೇಪತರವಾದ ಸ್ಥಳಕ್ಕೊಯ್ಯುವ ವಿಷಯವು, ಮಂಗಳೂರು ನಗರಸಭೆಯವರಿಂದ ಹಲವು ವರ್ಷಗಳಿಂದ ತೃಪ್ತಿಕರವಾಗಿ ತೀರ್ಮಾನವಾಗಿಲ್ಲ. ಅತ್ತಾವರದಲ್ಲಿರುವ ಈ ವಧಾಖಾನೆಯನ್ನು ಕುಡುಪು ತಿರುವೈಲು ಗ್ರಾಮಕ್ಕೆ ಸ್ಥಳಾಂತರಿಸಬೇಕೆಂದು ಶ್ರೀ| ಎಮ್. ರಾಮರಾಜ ಕಿಣಿಯವರು ಮಂಡಿಸಿದ ಠರಾವು, ಅಲ್ಪಸ್ವಲ್ಪ ತಿದ್ದುಪಡಿಯಿಂದ, ಈ ಸಭೆಯಲ್ಲಿ ಸ್ವೀಕೃತವಾಯಿತು.

——

ಕೇಂದ್ರದ ಆರೋಗ್ಯಸಚಿವ

ಶ್ರೀ| ಕರಮರಕರರ ಆಗಮನ

ಭಾರತ ಸರಕಾರದ ಆರೋಗ್ಯಸಚಿವ ಶ್ರೀ| ಡಿ. ಪಿ. ಕರಮರಕರರು ನಾಳೆ (ತಾ. 9), ಬೆಳಗಾಂವಿಯಿಂದ ವಿಮಾನದಲ್ಲಿ ಹೊರಟು ಮಧ್ಯಾಹ್ನ 12-40ಕ್ಕೆ ಮಂಗಳೂರಿಗೆ ಆಗಮಿಸುವರು. ಅಪರಾಹ್ನ 2-30ರಿಂದ 3-50ರ ವರೆಗೆ ಕದ್ರಿ ಪ್ರವಾಸೀ ಬಂಗಲೆಯಲ್ಲಿ, ಜಿಲ್ಲಾಧಿಕಾರಿಗಳಿಗೆ— ನಗರಸಭಾಧ್ಯಕ್ಷರುಗಳಿಗೆ ಮತ್ತು ಎಮ್. ಎಲ್. ಎ. ಗಳಿಗೆ ಭೇಟಿ. 3-30ಕ್ಕೆ ಮಂಗಳೂರು ಕಸ್ತೂರ್‌ಬಾ ಮೆಡಿಕಲ್ ಕೊಲೇಜನ್ನು ಸಂದರ್ಶಿಸುವರು. 4-30ರಿಂದ 5-30ರ ವರೆಗೆ ಸರಕಾರೀ ಆಸ್ಪತ್ರೆಯ ಸಂದರ್ಶನೆ- 5-30ರಿಂದ ಸಾಯಂಕಾಲ 6-30ರ ವರೆಗೆ ಗವರ್ನಮೆಂಟ್ ಕೊಲೇಜಿನಲ್ಲಿ ಸಾರ್ವಜನಿಕ ಸಭೆಯಲ್ಲಿ ಭಾಷಣ; ಆ ಮೇಲೆ 7-30ರ ವರೆಗೆ ಜಿಲ್ಲಾ ಕೊಂಗ್ರೆಸ್ ಕಚೇರಿಯಲ್ಲಿ ಕೊಂಗ್ರೆಸ್ ಕಾರ್ಯಕರ್ತರೊಡನೆ ವಿಚಾರವಿನಿಮಯ; ರಾತ್ರೆ 8ರಿಂದ 9ರ ವರೆಗೆ ಇಂಡಿಯನ್ ಮೆಡಿಕಲ್ ಎಸೋಸಿಯೇಶನಿನ ಸದಸ್ಯರೊಡನೆ ವಿಚಾರವಿನಿಮಯ.

ಮರುದಿನ (ತಾ. 10) ಮಂಗಳೂರಿನಿಂದ ಹೊರಡುವರು.

——

ನಗರಸಭಾ ಚುನಾವಣೆಗಳು ಜನವರಿಗಿಂತ ಮುಂದಕ್ಕೆ?

ಇದೇ ನವಂಬರ ತಿಂಗಳಲ್ಲಿ ನಡೆಯಬೇಕಾಗಿದ್ದ ಮಂಗಳೂರು ಮತ್ತು ಉಡುಪಿ ನಗರಸಭಾ ಚುನಾವಣೆಗಳು, "ನೆರೆ ಹಾವಳಿಯ" ನೆಪದಿಂದ 1962ನೇ ಜನವರಿ ತಿಂಗಳಿಗೆ ಮುಂದುವರಿಸಲ್ಪಟ್ಟಿದ್ದುವು.

ಈಗ, 1962ರಲ್ಲಿ ಮಹಾಚುನಾವಣೆಗಳು ನಡೆಯಲಿರುವುದರಿಂದ, ಈ ಸಾರ್ವತ್ರಿಕ ಚುನಾವಣೆಗಳಿಗಿಂತ ಮುಂಚಿತವಾಗಿ ನಗರಸಭಾ ಚುನಾವಣೆಗಳನ್ನು ನಡೆಸುವುದು ಸಾಧ್ಯವಿದೆಯೋ ಇಲ್ಲವೋ ಎಂಬುದಾಗಿ ಸರಕಾರವು ಪರ್ಯಾಲೋಚಿಸುತ್ತಿದೆಯೆನ್ನಲಾಗಿದೆ.

——

ಭಾರತೀಯ ಕೃಷಿ ಸಂಶೋಧನಾ ಪರಿಷತ್ತು

ಕೃಷಿ ಸಮಾಚಾರ ವಿಭಾಗ

ಅಕ್ಟೋಬರ್ ಮಾಸದ ಕೃಷಿ ಸೂಚನೆಗಳು

(1) ಹಿಂಗಾರಿ ಬೆಳೆ. (2) ನೀರಾವರಿ ಹಿಂಗಾರಿ ಜೋಳ,
(3) ಹಿಂಗಾರಿ ಗೋಧಿ. (4) ತೆಂಗಿನ ತೋಟ.
(5) ಚಳಿಗಾಲದ ಕಾಯಿಪಲ್ಯಗಳು.

ಮತ್ತು

(1) ವಿದ್ಯುತ್ಕೋಶದ ಸಹಾಯದಿಂದ ಕೋಳಿಮರಿ.
(2) ಕೃಷಿ ಸಂಶೋಧನೆಯಲ್ಲಿ ಹೊಸ ಹೆಜ್ಜೆ.

ಹಿಂಗಾರಿ ಬೆಳೆ

ಧಾರವಾಡ, ಬೆಳಗಾವಿ, ಬಿಜಾಪುರ, ಬಿದರೆ, ಗುಲ್ಬರ್ಗ, ರಾಯಚೂರ, ಬಳ್ಳಾರಿ, ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಜೋಳ, ಗೋಧಿ, ಮತ್ತು ಕಡಲೆ ಧಾನ್ಯಗಳೂ, ತುಮಕೂರು, ಕೋಲಾರ, ಮೈಸೂರು ಮತ್ತು ಮಂಡ್ಯ ಜಿಲ್ಲೆಗಳಲ್ಲಿ ಬೇಸಿಗೆಯ ರಾಗಿ ಮತ್ತು ಬತ್ತಗಳೂ ಮುಖ್ಯ ಹಿಂಗಾರಿ ಬೆಳೆಗಳಾಗಿವೆ. ಈ ಬಾರಿ ಹಿಂಗಾರಿ ಉತ್ಪಾದನೆಯನ್ನು ಹೆಚ್ಚಿಸುವುದಕ್ಕಾಗಿ ರಾಜ್ಯ ಸರಕಾರ ವಿಶೇಷ ಪ್ರಯತ್ನಗಳನ್ನು ಕೈಗೊಂಡಿದೆ. ಹುಟ್ಟುವಳಿಯನ್ನು ಹೆಚ್ಚಿಸಲು ಅನುಕೂಲವಾಗುವಂತಹ ಕೆಲವು ಸಾಮಾನ್ಯ ಹಾಗು ಕಡಿಮೆ ವೆಚ್ಚದ ಅಂಶಗಳ ಕಡೆಗೆ ರೈತರು ಗಮನಕೊಡಬೇಕು.

1) ಹಿಂಗಾರು ಬಿತ್ತನೆಗೆ ಯೋಗ್ಯವಿರುವ ಪ್ರತಿ ಅಂಗುಲ ಭೂಮಿಯನ್ನೂ ಸಾಗುವಳಿಗೆ ತರಬೇಕು.

2) ಸುಧಾರಿಸಿದ ಬೀಜಗಳನ್ನೇ ಬಿತ್ತನೆಗೆ ಉಪಯೋಗಿಸಬೇಕು. ಅಂತಹ ಬೀಜಗಳ ಪೂರೈಕೆಗೆ ರಾಜ್ಯದ ಒಕ್ಕಲುತನದ ಖಾತೆಯವರು ಪ್ರತಿ ಜಿಲ್ಲೆ, ತಾಲ್ಲೂಕು, ಹೋಬಳಿ, ಮತ್ತು ಹಳ್ಳಿಗಳ ಮಟ್ಟದ ವರೆಗೆ ವಿತರಣೆ ಏರ್ಪಾಟು ನಡೆಸಿದ್ದಾರೆ.

3) ಗಂಧಕದಿಂದ ಉಪಚರಿಸಿದ ಸುಧಾರಿಸಿದ ಬೀಜಗಳನ್ನು ಉಪಯೋಗಿಸಬೇಕು.

4) ಬಿತ್ತನೆಗೆ ಗುಣಿಗಾಳು ಪದ್ಧತಿಯನ್ನು ಅನುಸರಿಸಿ. ಇದರಿಂದ ಜೋಳ ಮುಂತಾದ ಬೆಳೆಗಳು ಚೆನ್ನಾಗಿ ಬರುವುವು.

5) ಕ್ರಿಮಿಕೀಟ ರೋಗರುಜಿನಾದಿಗಳನ್ನು ನಿಯಂತ್ರಿಸುವ ಬಗ್ಗೆ ಎಲ್ಲಾ ತಾಂತ್ರಿಕ ಸಲಹೆಗಳನ್ನೂ ಸಾಧನ ಸಲಕರಣೆಗಳನ್ನೂ ಒಕ್ಕಲುತನದ ಶಾಖೆಯವರಿಂದ ಪಡೆಯಿರಿ.

6) ರೈತರೆಲ್ಲರೂ ಸ್ಪರ್ಧಾಮನೋಭಾವದಿಂದ, ಇಮ್ಮಡಿ ಉತ್ಸಾಹದಿಂದ ಕೆಲಸ ಮಾಡಿ ಹಿಂಗಾರು ಬೆಳೆ ಆಂದೋಲನೆಗೆ ಜಯ ತರಬೇಕು.

ನೀರಾವರಿ ಹಿಂಗಾರಿ ಜೋಳ

ಕಬ್ಬಿಣದ ರಂಟೆಯನ್ನು ಹೊಡೆದು 3-4 ಸಾರಿ ಹರಗಿ ಹೆಂಟೆ ಒಡೆದು ಎಕರೆಗೆ 10 ಗಾಡಿ ದನದ ಗೊಬ್ಬರವನ್ನು ಹರಡಿ ಪುನಃ ಹರಗಿ ಜಮೀನನ್ನು ಬಿತ್ತುವುದಕ್ಕೆ ಹದಗೊಳಿಸಬೇಕು. M 35-1 ಸುಧಾರಿಸಿದ ತಳಿಯ ಜೋಳದ ಬೀಜಗಳನ್ನು ಬಿತ್ತನೆಗೆ ಉಪಯೋಗಿಸಿ ಬೀಜವನ್ನು ಸಾಲಿಗೆ ಮೂಲಕ ಜೊಳ್ಳು ತೆಗೆದು ಪುಷ್ಟಿಯಾದ ಬೀಜಗಳನ್ನೇ ತೆಗೆದಿಡಿ.

ಹಿಂಗಾರಿ ಗೋಧಿ

ನೇಗಿಲಿನಿಂದ ಉಳುಮೆಮಾಡಿ ಹರಗಿ ಬಿತ್ತುವುದಕ್ಕೆ ಜಮೀನನ್ನು ಸಿದ್ಧಮಾಡಿ.

ಎಕರೆಗೆ ಹತ್ತು ಗಾಡಿ ಕಾಂಪೋಸ್ಟ್ ಗೊಬ್ಬರ ಅಥವ ದನದ ಗೊಬ್ಬರವನ್ನು ಉಳುಮೆಯಾದ ನಂತರ ಹಾಕಿ 2-3 ಸಾರಿ ಹರಗಬೇಕು. ಉಳುಮೆಗೆ ಕಬ್ಬಿಣದ ನೇಗಿಲನ್ನು ಉಪಯೋಗಿಸಿ.

ಕೆಂಫೆಡ್ ಅಥವ ಬೇರಾವುದಾದರೂ ಉತ್ತಮ ತಳಿಯ ಬೀಜವನ್ನೇ ಬಿತ್ತಿ.

ತೆಂಗಿನ ತೋಟ

ತೆಂಗಿನ ತೋಟದಲ್ಲಿ ಇಷ್ಟರೊಳಗೇ ಉಳುಮೆಯಾಗದಿದ್ದರೆ ಕೂಡಲೇ ಉಳುಮೆಮಾಡಿ ಮುಗಿಸಬೇಕು. ಮಣ್ಣನ್ನು ಅಗತೆಮಾಡಿ ತಗ್ಗಿನ ಜಾಗಗಳಲ್ಲಿ ಗುಡ್ಡೆ ಹಾಕುವುದರಿಂದ ಹೆಚ್ಚಿನ ಲಾಭವಿದೆ. ಫಾಲ್ಗುಣ-ಚೈತ್ರದ ವೇಳೆಗೆ ಹಣ್ಣಾಗುವ ಕಾಯಿಗಳು ಈಗ ಎಳೆಯದಾಗಿರುತ್ತವೆ. ಕಾಯಿಗೊಂಚಲುಗಳು ಒಂದಕ್ಕೊಂದು ಹೆಣೆದುಕೊಂಡು ಸಿಕ್ಕುಗಳುಂಟಾಗದಂತೆ ಒಂದೊಂದು ಗೊಂಚಲನ್ನೂ ಸರಿಯಾಗಿ ಕಟ್ಟಿಬಿಡಿ.

ಚಳಿಗಾಲದ ಕಾಯಿಪಲ್ಯಗಳು

ಚಳಿಗಾಲದಲ್ಲಿ ಕೈಗೆ ಬರುವ ಟೊಮಾಟೊ, ಎಲೆಕೋಸು, ಹೂವುಕೋಸು, ಬಟಾಣಿ ಮೊದಲಾದ ಕಾಯಿಪಲ್ಯಗಳನ್ನು ಬೆಳೆಸಲು ಇದೀಗ ಸರಿಯಾದ ಕಾಲ. ಮೊದಲ ಹೆಜ್ಜೆಯಾಗಿ ನರ್ಸರಿಗಳಲ್ಲಿ ಬೀಜಗಳನ್ನು ಬಿತ್ತಿ ಸಸಿಮಾಡುವ ಕೆಲಸದಲ್ಲಿ ಕೂಡಲೆ ತೊಡಗಬೇಕು. ಜೊತೆಯಲ್ಲೇ ಸಸಿ ನಾಟಬೇಕಾದ ಭೂಮಿಯನ್ನು ಹದಮಾಡಿ ಸಿದ್ಧಗೊಳಿಸಬೇಕು. ನೀರಿನ ಸೌಕರ್ಯ ಈ ಕಾಲದಲ್ಲಿ ಬೇಕಾದಷ್ಟಿರುವುದರಿಂದ ಕಾಯಿಪಲ್ಯಗಳು ಸೊಂಪಾಗಿ ಬೆಳೆಯುವುವು. ಕೈ ತುಂಬ ಲಾಭವೂ ಬರುವುದು.

ಕೋಳಿ—ವಿದ್ಯುತ್ಕೋಶದ ಸಹಾಯದಿಂದ ಮರಿ ಮಾಡುವುದು

ಕೋಳಿ ಮೊಟ್ಟೆಗಳನ್ನು ವಿದ್ಯುತ್ತಿನ ಕಾವಿನಿಂದ ಮರಿಮಾಡುವುದು ಹೆಚ್ಚು ಹೆಚ್ಚು ವಾಡಿಕೆಗೆ ಬರುತ್ತದೆ. ಹಾಗೆ ವಿದ್ಯುತ್ತಿನ ಕೋಶವನ್ನುಪಯೋಗಿಸಿ ಮರಿ ಮಾಡುವಾಗ ಇಲ್ಲಿ ಕೊಟ್ಟಿರುವ ಅಂಶಗಳನ್ನು ಗಮನದಲ್ಲಿಡಿ

1. ಗಾಳಿ, ಬೆಳಕು, ಶೈತ್ಯಾಂಶ, ಉಷ್ಣಾಂಶ ಇವುಗಳ ಬಗ್ಗೆ ನಿಗಾ ತೆಗೆದುಕೊಳ್ಳಬೇಕು.

2. ಮೊದಲ ವಾರದಲ್ಲಿ ಕಾವು ಕೊಡುವ ಕಪಾಟಿನೊಳಗಿನ ಉಷ್ಣಾಂಶ 95° ಡಿಗ್ರಿ (ಫಾರನ್ ಹೀಟ್) ಇರಬೇಕು. ಕೋಣೆಯಲ್ಲಿನ ಉಷ್ಣಾಂಶ 70° ಡಿಗ್ರಿ ಇರಬೇಕು. ಕಪಾಟಿನೊಳಗಿನ ಉಷ್ಣಾಂಶವನ್ನು ಕ್ರಮೇಣ ಇಳಿಸುತ್ತಾ ಬಂದು ನಾಲ್ಕನೆಯ ವಾರದ ಹೊತ್ತಿಗೆ 75° ಡಿಗ್ರಿ ಇರುವಂತೆ ಏರ್ಪಡಿಸಬೇಕು.

3. ಶೈತ್ಯಾಂಶವನ್ನು ಹೆಚ್ಚಿಸುವುದರಿಂದ ಎಳೆ ಮರಿಗಳಿಗೆ ಹೆಚ್ಚು ಹಿತವಿದೆ. ನೆಲವನ್ನು ಒದ್ದೆಯಾಗಿಡುವುದರಿಂದ ಶೈತ್ಯಾಂಶವನ್ನು ಹೆಚ್ಚಿಸಬಹುದು

4. ಗಾಳಿ ಬೆಳಕಿಗೆ ಹೆಚ್ಚು ಅವಕಾಶ ಮಾಡಿಕೊಡಬೇಕು. ಇದರಿಂದ ಕೆಟ್ಟವಾಸನೆ ದೂರವಾಗುವುದು. ಆದರೆ ಹೆಚ್ಚಿನ ಗಾಳಿ ಹೊಡೆತಗಳು ಬರದಂತೆ ಕೋಣೆಯ ಕಿಟಕಿಗಳಿಗೆ ಒದ್ದೆಯ ಗೋಣಿ ಪಟ್ಟಿಗಳನ್ನು ಇಳಿಬಿಡಿ. ಸೂರ್ಯನ ಬೆಳಕು ನೇರವಾಗಿ ಕೋಣೆಯೊಳಗೆ ಬರದಂತೆ ಎಚ್ಚರಿಕೆ ವಹಿಸಿ.

ಕೃಷಿ ಸಂಶೋಧನೆಯಲ್ಲಿ ಹೊಸ ಹೆಜ್ಜೆ

ಇತ್ತೀಚೆಗೆ ನಡೆದ ಪ್ರಯೋಗ ಒಂದರ ಪ್ರಕಾರ ತೀರ ಪ್ರದೇಶಗಳ ಮೆಣಸಿನ ಕಾಯಿ ತೋಟಗಳಲ್ಲಿ ಸಸಿಗಳನ್ನು ಒಂಟೊಂಟಿಯಾಗಿ 5½ ಅಂಗುಲ ಅಂತರದಲ್ಲಿ ಪ್ರತಿ ಎರಡು ಸಾಲುಗಳಿಗೆ ಮಧ್ಯೆ 22 ಅಂಗುಲ ಜಾಗವಿರುವಂತೆ ನಾಟಿದರೆ ಹೆಚ್ಚು ಲಾಭವಿದೆಯೆಂದು ತಿಳಿದುಬಂದಿದೆ.

ಹೀಗೆ 5½"×22" ಅಂತರದಲ್ಲಿ ಮೆಣಸಿನಕಾಯಿ ಸಸಿಗಳನ್ನು ನಾಟಿ ಬೆಳೆಸುವುದರಿಂದ ಎಕರೆಗೆ ರೂಢಿಯ ಲಾಭಕ್ಕಿಂತ ಸುಮಾರು ರೂ. 150 ಅಧಿಕ ಲಾಭ ಬರುವುದಾಗಿ ಗೊತ್ತಾಗಿದೆ. ಈ ರೀತಿಯ ನಾಟಿ ವಿಧಾನವನ್ನು ಮಳೆಯನ್ನು ನಂಬಿರುವ ತೀರ ಪ್ರದೇಶಗಳಿಗೆ ಶಿಫಾರಸು ಮಾಡಲಾಗಿದೆ.

ಮಂಗಳೂರು ದಸರಾಮಹೋತ್ಸವ ಸಮಿತಿ ದಸರಾ ಕಾರ್ಯಕ್ರಮ

ಮಂಗಳೂರು ದಸರಾಮಹೋತ್ಸವ ಸಮಿತಿಯ ಆಶ್ರಯದಲ್ಲಿ ವರ್ಷಂಪ್ರತಿ ನಡೆಸಲ್ಪಡುವ ಸಾಹಿತ್ಯ ಮತ್ತು ಕಲಾ ಉತ್ಸವವು, ಇದೇ ತಾ. 15—10—61 ರಿಂದ ತಾ. 18—10—61ರ ವರೆಗೆ, ಪೆಂಟ್ಲೆಂಡ್ ಪೇಟೆಯಲ್ಲಿರುವ ಹಿಂದೀ ಪ್ರಚಾರ ಸಮಿತಿಯ ಸಭಾಭವನದಲ್ಲಿ, ಪ್ರತಿದಿನ ಸಾಯಂಕಾಲ 5-15ರಿಂದ ರಾತ್ರಿ 9-30ರ ವರೆಗೆ ಜರಗುವುದು.

ತಾ. 15ರಂದು ಮಂಗಳೂರಿನ ಶ್ರೀ ರಾಮಕೃಷ್ಣಾಶ್ರಮದ ಸ್ವಾಮಿ ಆದಿದೇವಾನಂದಜಿಯವರು ಉತ್ಸವದ ಉದ್ಘಾಟನೆ ನೆರವೇರಿಸುವರು; ಡಾ| ಕೆ. ಗಿರಿಧರರಾವ್‌ರವರು ಅಧ್ಯಕ್ಷತೆ ವಹಿಸುವರು; ಶ್ರೀ| ಯು. ರಾಜಾರಾಮ ಮಲ್ಯ, ಬಿ. ಎ., ಬಿ. ಎಲ್., ಅವರು ಮುಖ್ಯ ಭಾಷಣಗಾರರಾಗಿರುವರು. ಅಂದು, ಹರಿದಾಸ ಶ್ರೀ| ಶೇಣಿ ಗೋಪಾಲಕೃಷ್ಣ ಭಟ್‌ರವರಿಂದ ಹರಿಕೀರ್ತನೆಯಿದೆ.

ತಾ. 16ರಂದು ಶ್ರೀ| ವಿ. ಎಸ್. ಕುಡ್ವರು ಅಧ್ಯಕ್ಷತೆ ವಹಿಸಿದ ಸಭೆಯಲ್ಲಿ, ಹರಿದಾಸ ಶ್ರೀ| ಶೇಣಿ ಗೋಪಾಲಕೃಷ್ಣ ಭಟ್‌ರವರು ಭಾಷಣಕಾರರಾಗಿರುವರು. ಕದ್ರಿಯ ನೃತ್ಯವಿದ್ಯಾನಿಲಯದ ಶ್ರೀ| ಯು. ಎಸ್. ಕೃಷ್ಣರಾಯರ ಶಿಷ್ಯೆಯರ ನರ್ತನ ಕಾರ್ಯಕ್ರಮವಿದೆ.


ಮೂರನೇ ದಿನ (ತಾ. 17)ವನ್ನು ಮಹಿಳೆಯರ ದಿನವಾಗಿ ಆಚರಿಸಲಾಗುವುದು. ಅಂದು ಶ್ರೀಮತಿ ಪಿ. ಆನಂದಿ ಸದಾಶಿವರಾವ್‌ರವರ ಅಧ್ಯಕ್ಷತೆಯಲ್ಲಿ ಶ್ರೀಮತಿ ಸುಧಾಬಾಯಿ, ಬಿ. ಎ. ಬಿ. ಟಿ., ಅವರು ಭಾಷಣಕಾರರಾಗಿರುವರು. ಶ್ರೀಮತಿ ವರದಾದೇವಿಯವರಿಂದ ವೀಣಾವಾದನ (ಹಾಡುಗಾರಿಕೆಯೊಂದಿಗೆ) ಇದೆ.

ನಾಲ್ಕನೇ ದಿನ (ತಾ. 18) ಜಿಲ್ಲಾ ವಿದ್ಯಾಧಿಕಾರಿಗಳಾಗಿರುವ ಶ್ರೀ| ಕೆ. ವಿಠ್ಠಲ ಶೆಣೈಯವರು ಅಧ್ಯಕ್ಷತೆ ವಹಿಸುವರು. ಉರ್ವದ ಶ್ರೀ ಜಗದಂಬಾ ಯಕ್ಷಗಾನ ಮಂಡಲಿಯವರಿಂದ "ಸುಭದ್ರಾ ಕಲ್ಯಾಣ" ಪ್ರಸಂಗ ನಡೆಯಲಿದೆ.

ನಗರದ ಮಹಾಜನರೆಲ್ಲರೂ ಈ ನಾಲ್ಕು ದಿನಗಳ ಕಾರ್ಯಕ್ರಮಕ್ಕೆ ದಯಮಾಡಿಸಿ, ಮಹೋತ್ಸವದ ಯಶಸ್ಸಿಗೆ ಸಹಕರಿಸಬೇಕಾಗಿ ಸಂಚಾಲಕರು ವಿನಂತಿಸುತ್ತಾರೆ.

ದಿವಂಗತ ಉಳ್ಳಾಲ ವೆಂಕಟ್ರಾಯ ಕಿಣಿಯವರು

ಉಳ್ಳಾಲ ಸರ್ಕಲ್ ಕಾಂಗ್ರೆಸ್ ಕಮಿಟಿಯ ಅಧ್ಯಕ್ಷರೂ, ಉಳ್ಳಾಲ ಶ್ರೀ ನರಸಿಂಹ ದೇವಸ್ಥಾನದ ಜೊತೆ ಟ್ರಸ್ಟಿಯೂ, ಮಂಗಳೂರು ವಾಣಿಜ್ಯ ಕ್ಷೇತ್ರದ ಪ್ರಸಿದ್ಧ ವ್ಯಾಪಾರಿಯೂ, ಕಾಫಿ ಮರ್ಚೆಂಟ್ಸ್ ಎಸೋಸಿಯೇಶನ್‌ನ ಅಧ್ಯಕ್ಷರೂ, ಸಮಾಜ ಸೇವೆ, ಧರ್ಮನಿಷ್ಠೆ ನ್ಯಾಯಗಳನ್ನು ಪ್ರತಿಪಾದಿಸುವವರೂ,



ದಿ| ಶ್ರೀ| ಉಳ್ಳಾಲ ವೆಂಕಟರಾಯ ಕಿಣಿಯವರು.

ಸಂಘಸಂಸ್ಥೆಗಳಿಗೆ ಸದಾ ನೆರವು ನೀಡುವ ಉದಾರ ಹೃದಯಿಗಳೂ ಆಗಿದ್ದ ಶ್ರೀ| ಉಳ್ಳಾಲ ವೆಂಕಟ್ರಾಯ ಕಿಣಿಯವರು ತಾ. [illegible]-10-1961ರಂದು ಮಧ್ಯಾಹ್ನ 12-15ಕ್ಕೆ ಮಂಗಳೂರಲ್ಲಿರುವ ತಮ್ಮ ಸ್ವಗೃಹದಲ್ಲಿ ತಮ್ಮ 76ನೇ ವಯಸ್ಸಿನಲ್ಲಿ ದೈವಾಧೀನರಾದರೆಂದು ತಿಳಿಸಲು ತುಂಬಾ ವಿಷಾದವಾಗುತ್ತಿದೆ. ಶ್ರೀ| ಕಿಣಿಯವರಿಗೆ 6 ಜನ ಗಂಡು ಮಕ್ಕಳೂ, 4 ಹೆಣ್ಣು ಮಕ್ಕಳೂ ಅಲ್ಲದೆ, ಹಲವಾರು ಮಂದಿ ಮೊಮ್ಮಕ್ಕಳೂ ಇರುವರು. ಶ್ರೀಯುತರ ಮರಣ ಕಾಲದಲ್ಲಿ ಅವರ ಎಲ್ಲಾ ಪುತ್ರ-ಪುತ್ರಿಯರೂ ಅವರ ಬಳಿಯಲ್ಲೇ ಇದ್ದರು. ಅವರ ಆತ್ಮಕ್ಕೆ ಚಿರಶಾಂತಿಯನ್ನು ಕೋರುವುದೊಡನೆ, ಶ್ರೀ ಪರಮಾತ್ಮನು ಅವರ ಬಂಧುಬಳಗದವರಿಗೆ ದುಃಖಶಮನವಾಡಲಿ ಎಂದು ಪ್ರಾರ್ಥಿಸುವೆವು.

ಇತಿಹಾಸಪ್ರಸಿದ್ಧವಾದ ಕುಂಬಳೆ ಸೀಮೆಯ

ಮಧುಪುರ ವಿಘ್ನೇಶ

ಮಧುಪುರ ವಿಘ್ನೇಶನಿಗೆ ಮೂಡಪ್ಪ ಸೇವೆಯ ಸಿದ್ಧತೆ

(ಮಧೂರು—ಕಣಿಪುರ—ಕುಂಬಳೆ—ಯಕ್ಷಗಾನ)

(ಲೇಖಕ: ಕುಕ್ಕಿಲ ಕೃಷ್ಣ ಭಟ್ಟ)

[ಧಾರ್ಮಿಕ ಹಾಗು ಕಲಾ ಸೇವೆಯಲ್ಲಿ ಉಚ್ಚಸ್ಥಾನವಿರುವ ನಮ್ಮ ಜಿಲ್ಲೆಯ ಕುಂಬಳೆ ಸೀಮೆಯ ಮಧೂರು ಗಣಪತಿ ದೇವಸ್ಥಾನವು ಹಲವು ಶತಮಾನಗಳಿಂದ ಲಕ್ಷಾಂತರ ಭಕ್ತರನ್ನಾಕರ್ಷಿಸಿದೆ. ಇಲ್ಲಿ ಮೂಡಪ್ಪ ಸೇವೆಯು ಸುಮಾರು 164 ವರ್ಷಗಳ ಹಿಂದೆ ನಡೆದಿತ್ತು. ಈಗ, ಪುನಃ ಈ ಸೇವೆಯನ್ನು ನಡೆಸಲು ಸೂಚನೆಗಳಾಗಿದ್ದು ಯತ್ನ ನಡೆಯುತ್ತಿದೆ. ಶ್ರೀ| ಕುಕ್ಕಿಲ ಕೃಷ್ಣ ಭಟ್ಟರು ಈ ದೇವಾಲಯ ಹಾಗು ಕುಂಬಳೆಗೆ ಸಂಬಂಧಿಸಿದ ಇತರ ವಿಷಯಗಳನ್ನು ಸಂಕ್ಷಿಪ್ತವಾಗಿ ಈ ಲೇಖನದಲ್ಲಿ ಕೊಟ್ಟಿರುವರು. ಮುಂದಿನ ಎರಡು ಲೇಖಾಂಕಗಳಲ್ಲಿ "ಕುಂಬಳೆ ಅರಸರ ಚರಿತ್ರೆ" ಮತ್ತು ಅಲ್ಲಿಯ "ಗತಕಾಲದ ಯಕ್ಷಗಾನ ವೈಭವ"ದ ಕುರಿತು ಪ್ರಕಟಿಸಲಾಗುವುದು.]

ಜಾನಪದ ಕಲೆಯಾಗಿ ನಮ್ಮ ಬಡ ಹಳ್ಳಿಗಳಲ್ಲಿ 'ಬಹಿಷ್ಕೃತ ವೇಷದಿಂದ' ತಿರುಗುತ್ತಾ ಕಾಲಕ್ಷೇಪವಮಾಡುತ್ತಿದ್ದ ನಮ್ಮ ಕನ್ನಡ 'ಯಕ್ಷಗಾನ'ವು ರಾಜಾಶ್ರಯವನ್ನು ಪಡೆದು, ಶಾಸ್ತ್ರೀಯ ಸಂಸ್ಕಾರವನ್ನು ಹೊಂದಿ ಸರ್ವಾಂಗಸುಂದರವಾಗಿ ಬೆಳೆದು ಬಾಳಿದ ಊರು ಕುಂಬಳೆ.

ನಮ್ಮ ಕಲಾಸಂಸ್ಕೃತಿಗೆ ಅಲಂಕಾರಪ್ರಾಯವಾದುದೆಂದು ನಾವಿಂದು ಹೆಮ್ಮೆಪಡಬಹುದಾದ 'ದಶಾವತಾರ ಆಟ'ವೆಂಬ ದೃಶ್ಯಪ್ರಯೋಗವನ್ನು ಬಣ್ಣಕೊಟ್ಟು ಬೆಳಗಿಸಿ ಬಯಲಿಗೆ ತಂದ ಕೀರ್ತಿಯು ಇಂದು ನಾವೀಗ ಕೈಬಿಟ್ಟಿರುವ ದಕ್ಷಿಣ ಕನ್ನಡದ ದಕ್ಷಿಣ ಭಾಗದ ಆ ಕುಂಬಳೆ ಊರಿಗೆ ಸಲಬೇಕು. ಸುಶಿಕ್ಷಿತ ನಟವರ್ಗದವರಿಂದ ಕ್ರಮಬದ್ಧವಾಗಿ 'ದಶಾವತಾರ ಮೇಳ'ವನ್ನು ಪ್ರಸ್ಥಾಪಿಸಿ, ನಮ್ಮ ಯಕ್ಷಗಾನವನ್ನು ಕೈಕೊಟ್ಟು ನಡೆಸಿದವರು ಕುಂಬಳೆಯ ಅರಸರು. ಪ್ರಾಚೀನ ತುಳುನಾಡಿನ ರಾಜಧಾನಿಯೆಂದು ಪ್ರಸಿದ್ಧಿಯುಳ್ಳ ಆ ಕುಂಬಳೆಯ ಪಟ್ಟಣವೇ ರಾಮಾಯಣ ದೃಶ್ಯಕಾವ್ಯಗಳನ್ನು ಹಾಡಿ ಕಲಿಯುಗವನ್ನು ತ್ರೇತೆಯನ್ನಾಗಿ ಮಾಡಿದ 'ಯಕ್ಷಗಾನ ಕವಿಸಾರ್ವಭೌಮ'ನಾದ ಪಾರ್ತಿ ಸುಬ್ಬನ ಜನ್ಮಭೂಮಿ. ಇಲ್ಲಿದೆ ಸುಬ್ಬನ ಇಷ್ಟದೈವವಾದ ಕಣಿಪುರ ಗೋಪಾಲಕೃಷ್ಣನ ದೇವಸ್ಥಾನ – ನಮ್ಮ ಯಕ್ಷಗಾನದ ಆಶ್ರಯಸ್ಥಾನ. ಈ ಗೋಪಾಲಕೃಷ್ಣನೇ ಕುಂಬಳೆಯ ಅರಮನೆಯ ಕುಲದೈವ; ನಮ್ಮ ದಶಾವತಾರ ಮೇಳಗಳೆಲ್ಲ 'ಮುದದಿಂದ ಕೊಂಡಾಡುವ ಮದವೂರ ವಿಘ್ನೇಶ'ನ ಪುರಾಣ ಪ್ರಸಿದ್ಧವಾದ ಪುಣ್ಯಕ್ಷೇತ್ರವಿರುವುದೂ ಈ ಊರಲ್ಲಿ.

ಕುಂಬಳೆಯು ನಮ್ಮ ಯಕ್ಷಗಾನಕ್ಕೆ ಜೀವಕೊಟ್ಟ ಊರು, ಯಕ್ಷಗಾನವು ನಿಜವಾಗಿ ಜೀವಿಸಿಕೊಂಡಿದ್ದ ಊರು ಇಂದಿಗೂ ಅದು ಜೀವಂತವಾಗಿರುವ ಊರು. ನಮ್ಮ ರಾಜಕೀಯ ಭೂತದ ಕಡಿತಲೆಯು ಇಂದೀಗ ಈ ಕುಂಬಳೆ ಊರನ್ನು ಕರ್ನಾಟಕದಿಂದ ತುಂಡರಿಸಿತು. ನಾವು ಸಾಕಿದ 'ಯಕ್ಷಗಾನ'ವೆಂಬ ಕಟ್ಟದ ಹುಂಜವು ಆ ಭೂತಕ್ಕೆ ಬಲಿಯಾಯಿತು. ಕುಂಬಳೆಯನ್ನು ಕಳೆದುಕೊಂಡ ಕನ್ನಡ ಯಕ್ಷಗಾನ–ಕಿರೀಟವನ್ನು ಕಳಚಿದ ವೇಷ! ಕುಂಬಳೆ ಊರಿಗಾದ ಈ ಅನ್ಯಾಯ, ಪಾರ್ತಿ ಸುಬ್ಬನಿಗಾದ ಅಪಮಾನ, ಕಣ್ವಪುರ ಕೃಷ್ಣನಿಗಾದ ನಿರಾಕಾರ, ಮದವೂರ ವಿಘ್ನೇಶನಿಗಾದ ತಾತ್ಸಾರ, ನಮ್ಮ ಯಕ್ಷಗಾನಕ್ಕಾದ ಅಪಚಾರ, ಈ ಪಂಚಪಾತಕಗಳ ಪ್ರಾಯಶ್ಚಿತ್ತಕ್ಕಾಗಿ ನಮ್ಮ ಯಕ್ಷಗಾನ ಕಲಾಸಂಸ್ಕೃತಿಯ ಅಧಿಷ್ಠಾನವಾದ ಆ ಪುಣ್ಯಕ್ಷೇತ್ರಗಳ ಮಹಿಮೆಯನ್ನೂ ಯಕ್ಷಗಾನದ ಸೇವೆಯಲ್ಲಿಯೇ ಕೀರ್ತಿಕಾಯರಾದ ಆ ಊರಿನ ಸುಪ್ರಸಿದ್ಧ ಕಲಾವಿದರ ಹೆಸರನ್ನೂ ಕ್ಷಣಕಾಲ ಸ್ಮರಣೆಗೆ ತಂದು ಒಂದಿಷ್ಟು ಕಣ್ಣೀರನ್ನಾದರೂ ಸುರಿಸೋಣ. ಪಶ್ಚಾತ್ತಾಪವು ಪಾಪವನ್ನು ತೊಳೆಯಲಿ. ಈ ಸದ್ಭಾವನೆಯಿಂದ ಈ ಲೇಖನದಲ್ಲಿ ಆ ಕುರಿತು ಸಂಕ್ಷಿಪ್ತ ಪರಿಚಯವನ್ನು ಪುರಾಣೇತಿಹಾಸಗಳಿಂದ ಸಂಗ್ರಹಿಸಿ ಕೊಡಲಾಗಿದೆ.

ಮಧುಪುರದ ವಿಘ್ನೇಶ

ಕುಂಬಳೆ ಊರಿನ ಈ ವಿಘ್ನೇಶ ಕ್ಷೇತ್ರದ ಮಹಾತ್ಮ್ಯವು ಸ್ಕಾಂದ ಪುರಾಣದ ಸಹ್ಯಾದ್ರಿ ಖಂಡದಲ್ಲಿ ವಿಸ್ತಾರವಾಗಿ ವರ್ಣಿಸಲ್ಪಟ್ಟಿದೆ. ಕನ್ನಡದಲ್ಲಿ ಭಾಷಾಂತರವಾಗಿ ಇನ್ನೂ ಅಚ್ಚಾಗದೆ ಉಳಿದಿರುವ ಈ ಪುರಾಣ ಗ್ರಂಥದಲ್ಲಿ ಕಾವೇರೀ ಮಾಹಾತ್ಮ್ಯ ಸಂಧಿಯಾದ ಮೇಲೆ ಮಧುಪುರ ವಿಘ್ನೇಶನ ಮಹಾತ್ಮ್ಯ ಸಂಧಿಯು ಬರುತ್ತದೆ. ಸಂಧಿ ಪ್ರಾರಂಭದ ಪದ್ಯವು ಹೀಗಿದೆ:

"ಇದರ ಮುಂದೆ ಪಯಸ್ವಿನೀ ನದಿ
ಯದರ ದಡದೊಳಗಿರುವ ಸಾಕ್ಷಾ
ನ್ಮಧುಪುರದ ವಿಘ್ನೇಶ ಕತೆಯನು
ಸೂತ ಪೇಳಿದನು."

ಪರಮಪಾವನೆಯಾದ ಆ ಪಯಸ್ವಿನೀ ನದಿಯು 'ಪಡುಗಡಲನ್ನು ಸೇರುವಲ್ಲಿ' ಅನೇಕ ಮುನಿವರರು ತಪಸ್ಸು ಮಾಡಿಕೊಂಡಿರುತ್ತಿದ್ದರು. ಈ ಪುಣ್ಯಕ್ಷೇತ್ರಕ್ಕೆ ಒಮ್ಮೆ ತ್ರಿಗರ್ತ ದ್ರಾವಿಡದ ಅರಸು ಧರ್ಮಗುಪ್ತನೆಂಬವನು ಬಂದು ಆ ಋಷಿಗಳನ್ನು ಮಹೇಶ್ವರನ ಕೃಪೆಗಾಗಿ ಒಂದು ಯಜ್ಞವನ್ನು ಮಾಡಬೇಕೆಂದು ಪ್ರಾರ್ಥಿಸಿದನು. ರಾಜನ ಅಪೇಕ್ಷೆಯಂತೆ ಋಷಿಗಳು ಯಜ್ಞಶಾಲೆಯನ್ನು ನಿರ್ಮಿಸಿ, ಯಜ್ಞಕ್ಕೆ ಪ್ರಾರಂಭ ಮಾಡಿದರು. ಆದರೆ ಪ್ರಮಾದವಶಾತ್ ಯಜ್ಞಾರಂಭಕ್ಕೆ ಮೊದಲು ಮಾಡಬೇಕಾಗಿದ್ದ ವಿಘ್ನೇಶನ ಪೂಜೆಯನ್ನು ಮಾಡಲಿಲ್ಲ. ಅದರಿಂದ ವಿಘ್ನೇಶನು ಕೋಪಗೊಂಡು ಪ್ರಚಂಡವಾಗಿ ಸುರಿಯುವಂತೆ ಮಾಡಿ ಯಜ್ಞವನ್ನು ನೀರುಪಾಲು ಮಾಡಿದನು.

"ಅಧ್ವರವ ತೊಡಗಿದರು ಮರೆದರು
ಬುದ್ಧಿಯಲಿ ಗಣಪತಿಯ ಪೂಜೆಯು
ಸಿದ್ಧಿದಾಯಕನರಿದು ಕೋಪಿಸಿ
ಮೇಘಗಳ ಕರೆದು
ನಿರ್ದಯದ ಅಪ್ಪಣೆಯು ಕೊಟ್ಟನು
ಹೊದ್ದಿರುವ ಕಾಶ್ಮೀರ ತೀರದೊ
ಳಿದ್ದ ಯಜ್ಞದ ಶಾಲೆ ಮುಳುಗುವ
ತೆರದಿ ಮಳೆಯಾಯ್ತು."

ಅಕಾಂಡ ವೃಷ್ಟಿಯಿಂದ ಸಂಭವಿಸಿದ ಈ ಮಹದನರ್ಥಕ್ಕೆ ವಿಘ್ನೇಶನ ಪ್ರಕೋಪವು ಕಾರಣವೆಂದು ಅವರಿಗೆ ಅರಿವಾಗಲಿಲ್ಲ. ಇಂತಹ ವಿಘ್ನಪ್ರಾಪ್ತಿಗೆ ಕಾರಣವೇನೆಂದು ಋಷಿಗಳೂ ರಾಜನೂ ಕುಮಾರಧಾರಾ ಕ್ಷೇತ್ರದಲ್ಲಿದ್ದ ವಾಸುಕಿಯನ್ನು ಕೇಳಿದರು. ಆತನು 'ಗಣಪತಿಯ ಮನ್ನಿಸದರಿಂ ನಿಮಗಿನಿತು ಬಂದುದು ....ಭಿನ್ನ ಬುದ್ಧಿಯ ಬಿಟ್ಟು ವಿಘ್ನೇಶನನು ಪೂಜಿಪುದು' ಎಂದು ಉಪದೇಶಿಸಿದನು. ಇಂಥಾ ಸ್ಥಳದಲ್ಲಿ ಇಂತಿಂತಹ ವಿಧಾನದಿಂದ ಗಣಪತಿಯನ್ನು ರಚಿಸಿ ಪೂಜಿಸಬೇಕೆಂದು ವಿಸ್ತಾರವಾದ ವರ್ಣನೆಯಿದೆ. ಆ ಪ್ರಕಾರ ಋಷಿಗಳೂ ರಾಜನೂ ಹಿಂತಿರುಗಿ ಬಂದು ಕಾಶ್ಮೀರ ನದಿಯ ದಡದಲ್ಲಿ—ಇದು ಮದೂರು ದೇವಸ್ಥಾನದ ಒತ್ತಿನಲ್ಲಿ ಹರಿಯುತ್ತಿದೆ.—ಒಂದು ಗೋಡೆಯಲ್ಲಿ ಗಣಪತಿಯ ಚಿತ್ರವನ್ನು ಬರೆದು ಪೂಜಿಸಿದರು ಎಂಬ ಪದ್ಯವು ಹೀಗಿದೆ:—

"ನದಿಯ ಕಾಶ್ಮೀರದ ಪ್ರವಾಹದ
ಬದಿಯೊಳಗೆ ಭಿತ್ತಿಯ ಚಿತ್ರದಿ
ವಿಧಿಸಿ ವಿಘ್ನೇಶ್ವರನ ಸುಂದರ
ರೂಪವನು ಬರೆದು
ಅದರೊಳಾವಾಹಿಸಿ ಗಣೇಶನ
ವಿಧಿಯೊಳರ್ಚಿಸಿ ನಾಳಿಕೇರವು
ಕದಳಿಫಲಗಳು ಮಾವುದಾಡಿಮ
ಸಹ ನಿವೇದಿಸುತ"

ಹೀಗೆ ಭಕ್ತಿಯಿಂದ ಆರಾಧಿಸಲು ವಿಘ್ನೇಶನು ಪ್ರಸನ್ನನಾಗಿ ಪ್ರತ್ಯಕ್ಷ ಕಾಣಿಸಿಕೊಂಡು 'ಸೇವೆಯನು ಕೈಕೊಂಡು ಅಭಯವನ್ನಿತ್ತು ಭಿತ್ತಿಯಲಿ........ಅಂತರ್ಧಾನನಾದನು........ಅಂದು ಮೊದಲಾ ಕ್ಷೇತ್ರವಿಘ್ನರ ಬಂಧಕವು' ಎಂದು ವರ್ಣಿಸಲ್ಪಟ್ಟಿದೆ. ಹೀಗೆ ಯಜ್ಞವು ಸಾಂಗವಾಗಿ ಕೊನೆಗೊಂಡ ಮೇಲೆ ರಾಜನಿಗೆ ಇಷ್ಟಾರ್ಥಪ್ರಾಪ್ತಿಯಾಯಿತು. ವಿಘ್ನೇಶನನ್ನು ಪೂಜಿಸಿದ ಆ ಭಿತ್ತಿಯ ಸುತ್ತಲೂ ಗೋಪುರವನ್ನು ಕಟ್ಟಿಸಿ, ತಾನು ಯಜ್ಞವನ್ನು ಮಾಡಿಸಿದ ಆ ಸ್ಥಳದಲ್ಲಿಯೇ ಶಿವಾಲಯವನ್ನು ನಿರ್ಮಿಸಿ, ಮದನೇಶ್ವರ ಲಿಂಗವನ್ನು ಪ್ರತಿಷ್ಠೆ ಮಾಡಿ 'ಚಂದದಲೆ ಗೋಪುರವನಾದಮದಿಂದಲರಿತವರೊಡನೆ ಕಟ್ಟಿಸಿ'ದನು ಎಂದಿದೆ. ಸಂಧಿಯ ಕೊನೆಯ ಪದ್ಯ:

ದ್ವಿಜರ ಸೇವೆಗೆ ನಿಲಿಸಿ ನಡೆಸಿದ
ವಿಜಯಕರವಾ ಕ್ಷೇತ್ರವೀಶ್ವರ
ನಿಜತನುವಿನಾಕರದ ಸಾಂಬನಮೂರ್ತಿ
ವಿಘ್ನೇಶ ।
ಭಜಿಸೆ ರಾಯನು ಧರ್ಮಗುಪ್ತನು
ಗಜವದನನಿಷ್ಟಾರ್ಥವಿತ್ತನು
ಸುಜನಸೇವ್ಯ ಪಯಸ್ವಿನೀ ನದಿ
ಪರಮ ಪಾವನವು ॥

ಪುರಾಣದಲ್ಲಿ ವರ್ಣಿಸಿದಂತೆಯೇ ಅಲ್ಲಿಯ ವಸ್ತುಸ್ಥಿತಿ ಇದೆ. ಮದನೇಶ್ವರ ದೇವಾಲಯದ ಎಡಭಾಗದಲ್ಲಿದೆ ಗೋಡೆಯಲ್ಲಿ ಬರೆದ ವಿಘ್ನೇಶ್ವರನ ಭವ್ಯವಾದ ಮಣ್ಣಿನ ವಿಗ್ರಹ. ಆ ವಿಗ್ರಹಕ್ಕೆ ಉಚಿತವಾದ ಸ್ಥಾನವಲ್ಲವೆಂದೇ ಯಾರೊಬ್ಬನೂ ಹೇಳುವಂತಿರುವ ಅತ್ಯಂತ ಇಕ್ಕಟ್ಟಾದ ಒಂದು ಪಾರ್ಶ್ವ ಭಾಗದ ಗೋಡೆಯಲ್ಲಿರುವ ಗಣಪತಿಯ ಸ್ಥಾನವನ್ನೂ ಅದಕ್ಕೆ ವಾಸ್ತುರಚನೆಯಲ್ಲಿ ವಿಶೇಷವಾದ ಸಮುಚಿತ ಸಂಬಂಧವಿಲ್ಲದಂತೆ ತೋರುವ ಒತ್ತಿನ ಲಿಂಗಪ್ರತಿಷ್ಠೆಯ ಸ್ಥಾನವನ್ನು ನೋಡುವಾಗ ಶಿವಲಿಂಗ ಮತ್ತು ಗಣಪತಿಯನ್ನು ಮೊದಲು ಪ್ರತಿಷ್ಠೆ ಮಾಡಿ ಆ ಮೇಲೆ ಅವೆರಡೂ ಒಂದೇ ಕಟ್ಟೋಣದಲ್ಲಿ ಒಳಪಡುವಂತೆ ಗೋಪುರವನ್ನು ರಚಿಸಿದುದಾಗಿದೆ ಎಂದೇ ಕಾಣುತ್ತದೆ. ಅಸಾಮಾನ್ಯ ಗಾತ್ರದ ಶಿವಲಿಂಗ ಪ್ರತಿಷ್ಠೆಯುಳ್ಳ ದೇವಾಲಯವು ಶಿವದೇವಾಲಯವೇ ಆಗಿದ್ದು ಗಣಪತಿಯ ವಿಗ್ರಹವು ಅದರ ಒಂದು ಏಕದೇಶದಲ್ಲಿ ಮಾತ್ರ ಇರುವುದಾದರೂ ಆ ಕ್ಷೇತ್ರವು ವಿಘ್ನೇಶ್ವರನ ಹೆಸರಿನಿಂದಲೇ ಪ್ರಸಿದ್ಧಿ ಇರುವುದರಿಂದ ಈ ವಿಘ್ನೇಶ್ವರನ ಮಹಿಮೆಯು ಅನಾದಿ ಕಾಲದಿಂದಲೇ ಅದೆಷ್ಟು ಘನತೆಯನ್ನು ಪಡೆದಿತ್ತೆಂದು ಊಹಿಸಬಹುದು.

ಹೀಗೆ ಪುರಾಣ ಪ್ರಸಿದ್ಧ ಮಹಿಮೆ

ಯುಳ್ಳ ಈ ವಿಷ್ಣೇಶನು ಮುಂದೆ ಕುಂಬಳೆ ಅರಸರ ಕಾಲದಲ್ಲಿ ಕಣಿಪುರ ಗೋಪಾಲ ಕೃಷ್ಣನಂತೆ ಆ ರಾಜಕುಟುಂಬ ಕುಲದೈವವೂ ಆಗಿದ್ದು ಗಟ್ಟದ ಕೆಳಗಣ ಎಲ್ಲ ಸೀಮೆಗಳಲ್ಲಿಯೂ ಈತನ ಕೀರ್ತಿಯು ಹಬ್ಬಿತು. ಬೇರೆ ಬೇರೆ ಸೀಮೆಗಳಿಂದ ದಿನಂಪ್ರತಿ ಭಕ್ತರ ತಂಡಗಳು ಬಂದು ಪೂಜೆ ಪುನಸ್ಕಾರಗಳನ್ನು ಮಾಡಿಸಿ ಹರಕೆಯೊಪ್ಪಿಸಿ ಹೋಗುತ್ತಿರುವ ಆ ಸಂಭ್ರಮವನ್ನು ಅಲ್ಲಿ ಹೋಗಿಯೇ ನೋಡಬೇಕು. ಟಿಪ್ಪು ಸುಲ್ತಾನನು ಈ ಪ್ರಾಂತವನ್ನು ಕೊಳ್ಳೆ ಹೊಡೆಯುವಾಗ ಇಲ್ಲಿಗೂ ಧಾಳಿ ಕೊಟ್ಟಿದ್ದನು. ದೇವಸ್ಥಾನದ ಅಂಗಣದಲ್ಲಿರುವ ಕಲ್ಲಿನಭಾವಿಯ ಸುತ್ತಲೂ ಇದ್ದ ಚಂದ್ರಶಾಲೆಯ ಮಾಡಿನ ತಾಮ್ರದ ಹೊದಿಕೆಯನ್ನು ತನ್ನ ಕೈಯ ಖಡ್ಗದಿಂದಲೇ ತುಂಡರಿಸುತ್ತಿದ್ದಾಗ ಮಧ್ಯೇ ನೀರ ಡಸಲು ಆ ಭಾವಿಯ ನೀರನ್ನು ತೆಗೆಸಿ ಕುಡಿದ ಮರುಕ್ಷಣದಲ್ಲಿ ಆತನ ಮನಃ ಪರಿವರ್ತನೆಯಾಗಿ ಇದು ಪವಿತ್ರ ಕ್ಷೇತ್ರವೆಂದು ಮನಗಂಡು ಕೊಳ್ಳೆಹೊಡೆಯುವುದನ್ನು ಅಲ್ಲಿಗೆ ನಿಲ್ಲಿಸಿ ಮತ್ತೆ ಹಾಳುಗೆಡವದೆ ಬಿಟ್ಟುಹೋದನೆಂದೂ ಆ ಊರಿನ ಜನರು ಹೇಳುವ ಐತಿಹ್ಯವಿದೆ. ಟಿಪ್ಪುವಿನ ಖಡ್ಗದಿಂದ ಅರ್ಧಮರ್ಧ ಗಡಿಗೊಂಡ ಆ ಮಾಡಿನ ತಗಡಿನ ಕರೆಯಂಚಿನ ಚಾಲರಿಯ ತುಂಡುಗಳು ಆ ದೇವಸ್ಥಾನದಲ್ಲಿ ತೆಗೆದಿಟ್ಟಿರುವುದನ್ನು ಇಂದೂ ನೋಡಬಹುದು.. ಆ ನೀರು ಸಕಲ ಜಾಡ್ಯಹರವೆಂದೂ ವಿಷಹರವೆಂದೂ ಜನರು ನಂಬುತ್ತಾರೆ, ಮತ್ತು ವ್ಯಾಧಿಗ್ರಸ್ತರಿಗೆ ಕೊಡುವುದಕ್ಕಾಗಿ ಬಹು ದೂರದಿಂದ ಬಂದು ಈ ನೀರನ್ನು ಇಂದೂ ಅನೇಕರು ಕೊಂಡು ಹೋಗುತ್ತಾರೆ

ಮೂಡಪ್ಪ ಸೇವೆ

ಊರಿಗೆ ಕ್ಷಾಮಡಾಮರಗಳು ಸಂಭವಿಸಿದಾಗ ಅದರ ಪರಿಹಾರಾರ್ಥವಾಗಿ ಈ ವಿಷ್ಣೇಶನಿಗೆ ಸಲುತ್ತಿದ್ದ ಮೂಡಪ್ಪ ಸೇವೆ ಎಂಬ ಉತ್ಸವವು ಬಹಳ ವಿಶೇಷ ವಿಜೃಂಭಣೆಯಿಂದ ನಡೆಯುವಂಥದ್ದು. ಕೊಡಗು, ಮೈಸೂರು, ಮಲೆಯಾಳ, ಗೋಕರ್ಣ ಇತ್ಯಾದಿ ಹೊರ ಸೀಮೆಗಳಿಂದಲೂ ಹರಕೆ, ಕಾಣಿಕೆಗಳು ಈ ಉತ್ಸವಕ್ಕೆ ಬರುತ್ತಿದ್ದುವಂತೆ. 1797ನೇ ಇಸವಿಯಲ್ಲಿ ಊರಲ್ಲಿ ಕೊಳ್ಳೆ, ಸುಲಿಗೆ, ದಂಗೆ, ದರೋಡೆಗಳು ವಿಶೇಷ ನಡೆಯುತ್ತಿದ್ದ ಸಂದರ್ಭದಲ್ಲಿ (ಪಾರ್ತಿ ಸುಬ್ಬನ ಕಾಲದಲ್ಲಿ) ಇಂತಹ ಮೂಡಪ್ಪ ಸೇವೆಯೊಂದು ನಡೆದಿದೆ. ಆ ಮೇಲೆ ಇದುವರೆಗೆ ಈ ಸೇವೆಯು ನಡೆದಿಲ್ಲ. ಇದೀಗ ಈ ವರ್ಷ ಆ ಮಹಾ ಸೇವೆಯನ್ನು ನಡೆಸಬೇಕೆಂದು ದೇವಸ್ಥಾನದ ಆಡಳಿತೆ ಮಂಡಳಿಯವರು ಊರಿಗೆ ಕರೆಯುತ್ತಿದ್ದಾರೆ; ಅದರ ಸಿದ್ಧತೆಗಾಗಿ ಕಳೆದ ವರ್ಷಾರಂಭ ಉತ್ಸಾಹದಿಂದ ದುಡಿಯುತ್ತಲಿದ್ದಾರೆ. ರಾಜಕೀಯದ ಹೆಸರಿನಲ್ಲಿಯೂ ಕಲೆಯ ಹೆಸರಿನಲ್ಲಿಯೂ ಸಂಶೋಧನೆಯ ಹೆಸರಿನಲ್ಲಿಯೂ ಸತ್ಯ, ಧರ್ಮ, ನ್ಯಾಯ, ನೀತಿಗಳನ್ನು ತಿಳಿದವರೇ ತುಳಿಯುತ್ತಿರುವ ಈ ಕಾಲದಲ್ಲಿ ಇಂತಹ ಶ್ರದ್ಧಾಯುಕ್ತ ಧರ್ಮಕಾರ್ಯವು ನಡೆಯಬೇಕಾದುದು ಸರ್ವಥಾ ಸಮಯೋಚಿತವೂ ಶ್ರೇಯಸ್ಕರವೂ ಆಗಿದೆ. ಸರ್ವರೂ ಈ ಮಹತ್ಕಾರ್ಯಕ್ಕೆ ನೇರವಾಗಿ ಯಥಾಶಕ್ತಿ ಸೇವೆಸಲಿಸಿ, ಆ ಮದವೂರ ವಿಷ್ಣೇಶನ ಕೃಪೆಗೆ ಪಾತ್ರರಾಗೋಣ. ಆತನ ಅನುಗ್ರಹದಿಂದಲಾದರೂ ನಮ್ಮ ಮದ ಮಾಂದ್ಯಗಳು ತೊಲಗಿ ಹೋಗಲಿ. ಕುಂಬಳೆಯು ಊರು ನಮ್ಮದಾಗಲಿ. ನಮ್ಮ ಯಕ್ಷಗಾನವು ಮೊದಲಿನಂತೆಯೇ ಊರ್ಜಿತಕ್ಕೆ ಬರಲಿ. ಪಾರ್ತಿ ಸುಬ್ಬನ ಕೀರ್ತಿಯು ಎಂದೆಂದೂ ಅಳಿಯದಂತಾಗಲಿ. ——

ಶ್ರೀ ರಮಾದೇವಿ ಭಕ್ತಮಂಡಳಿ, ಮಂಗಳೂರು

ಇವರ ಬಾಲ ಮಹೋತ್ಸವವು ತಾರೀಕು 8—10—61ನೇ ಆದಿತ್ಯವಾರ ಸಾಯಂಕಾಲ 4-30ಕ್ಕೆ ಮಂಗಳೂರು ಗಣಪತಿ ಹೈಸ್ಕೂಲಿನ ಶ್ರೀ ಶಾರದಾ ಸಭಾ ಮಂದಿರಲ್ಲಿ ಪೂಜ್ಯಶ್ರೀ ಸದ್ಗುರು ರಮಾದೇವಿಯವರ ಸಾನಿಧ್ಯದಲ್ಲಿ ಜರಗುವುದು. ಆ ಸಂದರ್ಭದಲ್ಲಿ ಶ್ರೀಸದ್ಗುರು ಮಾತೆಯವರು ಪ್ರವಚನವನ್ನು ಈಯಲಿರುವರು. ——


ಕಬಾಡಿ ಫೈನಲ್ಸ್ ಪಂದ್ಯಾಟದಲ್ಲಿ ಜೈಭವಾನಿ ಟೀಮಿನವರ ವಿಜಯ

ಕಳೆದ ತಾ. 1—10—61ರಂದು ಬೊಕ್ಕಪಟ್ಣ ಚರ್ಚಗೇಟ್ ಟೀಮ್ ಮತ್ತು ಜೈಭವಾನಿ ಟೀಮುಗಳೊಳಗೆ ಜರಗಿದ ಕಬಾಡಿ ಫೈನಲ್ಸ್‌ನಲ್ಲಿ ಜೈಭವಾನಿ ಟೀಮಿನವರು ಚರ್ಚಗೇಟ್ ಟೀಮಿನವರನ್ನು 18:9 ಪೊಂಟ್‌ಗಳಿಂದ ಸೋಲಿಸಿ 1½ ಅಡಿ ಎತ್ತರದ ಬೆಳ್ಳಿಯ ಕಪ್‌ನ್ನು ಪಡೆದರು. ಪ್ರೇಕ್ಷಕರ ಪೈಕಿ ವಿವೇಕಾನಂದ ಬೋಳೂರರು ಒಂದು ಕಪ್ಪನ್ನೂ, ಎಚ್. ಗಂಗಾಧರರವರು ಸ್ವಲ್ಪ ಧನಸಹಾಯವನ್ನೂ ವಿಜಯಿಗಳಿಗೆ ಬಹುಮಾನಿಸಿ ಪುರಸ್ಕರಿಸಿದರು.

ವಿಜಯಿಗಳು:—1. ರಾಮಪ್ಪ ಕಾಂಚನ್ (ಕ್ಯಾಪ್ಟನ್), 2. ಸೀತಾರಾಮ ಬಂಗೇರ, 3. ಪುರುಷೋತ್ತಮ ಪಿ. ಮೆಂಡನ್, 4. ವಿಠಲ ಕರ್ಕೇರ ಬಿ, 5. ಉಮೇಶ ಕರ್ಕೇರ ಬಿ., 6. ಭಾಸ್ಕರ ಕರ್ಕೇರ ಬಿ., 7. ರಾಘವ ಬಿ.

——

ಭಾರತದಲ್ಲಿ ಪಶುಪಾಲನೆ



ಭಾರತದಲ್ಲಿ ಒಟ್ಟು 159 ದಶಲಕ್ಷ ಗೋವುಗಳೂ 45 ದಶಲಕ್ಷ ಎಮ್ಮೆಗಳೂ ಇವೆಯೆಂದು ಅಂದಾಜುಮಾಡಲಾಗಿದೆ. ಪಶುಸಂಪತ್ತಿನ ವಿಷಯದಲ್ಲಿ ಭಾರತಕ್ಕೆ ಹಾಲ್ಕನೆಯ ಸ್ಥಾನ ದೊರೆಯುತ್ತದೆ. 1956ರಲ್ಲಿ ನಡೆದ ಪಶುಸಂಪತ್ತಿನ ಗಣತಿಯ ಪ್ರಕಾರ 39 ದಶಲಕ್ಷ ಕುರಿಗಳೂ 55 ಲಕ್ಷ ಮೇಕೆಗಳೂ 8 ದಶಲಕ್ಷ ಇತರ ಪ್ರಾಣಿಗಳೂ 95 ದಶಲಕ್ಷ ಕೋಳಿಗಳೂ ಇವೆ.

ಬೇಸಾಯ ಕ್ಷೇತ್ರದಲ್ಲಿ ಬಹುಮುಖ ಅಭಿವೃದ್ಧಿ ಕಾರ್ಯಕ್ರಮದ ಅಂಗವಾಗಿ ಪಶುಪಾಲನೆಗೆ ಒಂದು ಮಹತ್ವದ ಸ್ಥಾನವಿದೆ. ಮುಖ್ಯವಾಗಿ 'ಪ್ರೊಟೀನ್' ಅಥವಾ ಸಸಾರಜನಕದಿಂದ ಕೂಡಿದ ಆಹಾರವನ್ನು ಒದಗಿಸುವುದಕ್ಕೆ ಪಶುಪಾಲನೆ ಸಹಾಯಕವಾಗುತ್ತದೆ. ಹಾಲು, ಮೊಸರು, ಬೆಣ್ಣೆ, ತುಪ್ಪ ಇತ್ಯಾದಿಗಳು ಮುಖ್ಯ ಆಹಾರವಸ್ತುಗಳಾಗಿವೆ.

ಹೆಚ್ಚು ಹಾಲನ್ನು ಕೊಡಬಲ್ಲಂತಹ ತಳಿಯ ಅಭಿವೃದ್ಧಿಗೆ ಸಂಬಂಧಪಟ್ಟ ಹಲವು ಯೋಜನೆಗಳು ಜಾರಿಯಾಗುತ್ತವೆ. ಗೋಶಾಲಾ ಅಭಿವೃದ್ಧಿ ಯೋಜನೆ, ಗೋಸದನಗಳ ಯೋಜನೆ ಮತ್ತು ಮೂಲ ಪಶುಪಾಲನಾ ಗ್ರಾಮಯೋಜನೆ—ಇವೇ ಮೊದಲಾದ ಯೋಜನೆಗಳ ಉದ್ದೇಶ ತಳಿ ಸಮೃದ್ಧಿಯೇ ಆಗಿದೆ.

ದ್ವಿತೀಯ ಪಂಚವಾರ್ಷಿಕ ಯೋಜನೆ ಕಾಲದಲ್ಲಿ ಪಶುಪಾಲನೆಗಾಗಿ ಒಟ್ಟು 21 ಕೋಟಿ ರೂ.ಗಳಷ್ಟು ಹಣ ವೆಚ್ಚವಾಗಿದೆ. ಪ್ರಥಮ ಯೋಜನೆ ಕಾಲದಲ್ಲಿ 8 ಕೋಟಿ ರೂ.ಗಳನ್ನು ಮಾತ್ರ ಈ ಬಾಬಿಗಾಗಿ ಒದಗಿಸಲಾಗಿತ್ತು.

ಪ್ರಥಮ ಯೋಜನೆ ಕಾಲದಲ್ಲಿ ಕೃತಕ ಗರ್ಭಧಾರಣೆ ಕೇಂದ್ರಗಳಿರುವ ಒಟ್ಟು 146 ಮೂಲ ಪಶುಪಾಲನಾ ಬ್ಲಾಕುಗಳನ್ನು ಮತ್ತು 25 ಗೋಸದನಗಳನ್ನು ತೆರೆಯಲಾಯಿತು. ಗೋಮಾರಿರೋಗ ನಿರ್ಮೂಲನಾ ಕೇಂದ್ರವೊಂದನ್ನೂ ಸ್ಥಾಪಿಸಲಾಯಿತು.

ದ್ವಿತೀಯ ಯೋಜನೆ ಕಾಲದಲ್ಲಿ ಹೊಸದಾಗಿ 194 ಮೂಲ ಪಶುಪಾಲನಾ ಬ್ಲಾಕುಗಳನ್ನು ('ಕೀವಿಲೇಜ್ ಬ್ಲಾಕ್') ಸ್ಥಾಪಿಸಲಾಯಿತು ಮತ್ತು ಪ್ರಥಮ ಯೋಜನೆ ಕಾಲದಲ್ಲಿ ಸ್ಥಾಪಿಸಿದಂತಹ 114 ಬ್ಲಾಕುಗಳನ್ನು ವಿಸ್ತರಿಸಲಾಯಿತು. ಒಟ್ಟಿನಲ್ಲಿ ಹೇಳುವುದಾದರೆ, 1960—61ರ ವೇಳೆಗೆ ಒಟ್ಟು ಸುಮಾರು 2000 ಮೂಲ ಪಶುಪಾಲನಾ ಕೇಂದ್ರಗಳೂ 670 ಕೃತಕ ಗರ್ಭಧಾರಣ ಕೇಂದ್ರಗಳೂ ಸ್ಥಾಪಿತವಾಗಿದ್ದುವು.

ದ್ವಿತೀಯ ಯೋಜನೆ ಕಾಲದಲ್ಲಿ ಹೊಸದಾಗಿ 34 ಗೋಸದನಗಳನ್ನು ಸ್ಥಾಪಿಸಲಾಯಿತು. 246 ಗೋಶಾಲಾಗಳ ಅಭಿವೃದ್ಧಿ ಕಾರ್ಯಕ್ರಮವನ್ನು ಕೈಗೆದುಕೊಳ್ಳಲಾಯಿತು. 1960—61ರ ವೇಳೆಗೆ 4000 ಪಶುವೈದ್ಯ ಶಾಲೆಗಳನ್ನು ಭಾರತದ ನಾನಾ ಕಡೆಗಳಲ್ಲಿ ಸ್ಥಾಪಿತವಾಗಿದ್ದುವು.

ತೃತೀಯ ಯೋಜನೆ ಕಾಲದಲ್ಲಿ ಪಶುಪಾಲನೆಗಾಗಿ 54 ಕೋಟಿ ರೂ.ಗಳನ್ನು ವಿಾಸಲಿಡಲಾಗಿದೆ.

ಮುಂದಿನ ಐದು ವರ್ಷಗಳಲ್ಲಿ ಮೂಲ ಪಶುಪಾಲನಾ ಯೋಜನೆಯನ್ನು ಪುನರ್ವಿಮರ್ಶಿಸಲಾಗುವುದು. ಒಂದೊಂದು ಗ್ರಾಮಾಂತರ ಬ್ಲಾಕಿನಲ್ಲೂ ಹತ್ತು ಕೇಂದ್ರಗಳನ್ನು ಒದಗಿಸುವುದು ಇದರ ಉದ್ದೇಶವಾಗಿದೆ. ಕೇಂದ್ರ ಕೃತಕ ಗರ್ಭಧಾರಣ ಕೇಂದ್ರಗಳನ್ನು ಸ್ಥಾಪಿಸಲಾಗುವುದು. ಗೋಮಾರಿ ರೋಗ ತಡೆಗಟ್ಟುವ ಕಾರ್ಯಕ್ರಮವನ್ನೂ ಬಿರುಸುಗೊಳಿಸಲಾಗುವುದು.

ಪಶುಸಂವರ್ಧನೆ ಕಾರ್ಯಕ್ರಮದ ಉದ್ದೇಶ ದ್ವಿಮುಖವಾಗಿದೆ. ಒಂದು ಉದ್ದೇಶ ಬೇಸಾಯಕಾಲದಲ್ಲಿ ತುಂಬಾ ಉಪಯೋಗಕ್ಕೆ ಬರುವ ಬಲಿಷ್ಠ ಎತ್ತುಗಳನ್ನು ಪಡೆಯುವುದು. ಇನ್ನೊಂದು ಉದ್ದೇಶ ಹೆಚ್ಚು ಪ್ರಮಾಣದಲ್ಲಿ ಹಾಲು ಕೊಡುವ ಹಸುಗಳನ್ನು ಪಡೆಯುವುದು. ಈ ಉದ್ದೇಶ ಸಾಧನೆಗೆಂದೇ ಪ್ರತ್ಯೇಕ ಯೋಜನೆಗಳು ತಯಾರಾಗಿವೆ.

ಕುರಿ, ಹಂದಿ, ಕೋಳಿ ಮತ್ತಿತರ ಕೃಷಿಕ್ಷೇತ್ರದಲ್ಲಿ ಪ್ರಯೋಜನಕ್ಕೆ ಬರುವ ಪಶುಸಂಪತ್ತನ್ನು ಹೆಚ್ಚಿಸಲು ಪ್ರತ್ಯೇಕ ಯೋಜನೆಗಳು ಜಾರಿಯಲ್ಲಿವೆ, ಈ ಯೋಜನೆಗಳ ಫಲವಾಗಿ ರೈತರು ಈ ಉದ್ಯಮಗಳನ್ನೂ ಅನುಸರಿಸುವುದರಿಂದ ವರ್ಷಪೂರ್ತಿ ಉದ್ಯೋಗಾವಕಾಶಗಳನ್ನು ಪಡೆಯುವುದಲ್ಲದೆ ತಮ್ಮ ಆದಾಯ ಹೆಚ್ಚಿಸಿಕೊಳ್ಳುವ ಅವಕಾಶಗಳನ್ನೂ ಪಡೆದಿರುವರು.

——

NOTICE

In the Court of the Munsiff of Kasargod

O. S. No. 62/1961.

Between:

Shankara Bhatta —Plaintiff

and

Rama Bhatta —Defendant

To the defendant Rama Bhatta S/o Talengala Muddu Narayana Bhatta residing at Mithanadka of Karopady Village, Puttur Taluk.

Take notice that the suit filed by the plaintiff for recovery of the mortgage amounts due is posted for to 10—10—61, and if you fail to appear on that day the suit will be declared exparte and proceeded with.

(By Order)

N VENKATRAMANA BHAT,
Advocate for Plaintiff.

Kasargod, 3—10—61.

——

NOTICE

In the Court of the Munsiff of Kasaragod

R.I.A.579/1961 in O.S.176/1957.

Between:

Lakshminarayana Rao–Petitioner

and

Yeshoda –Respondent

To

Respondent, Yeshoda, widow of Kotekani Chanda Vaidyar Ramappa, residing at Bangra Manjeshwar Village, Kasaragod Taluk.

The above petition for final decree is posted to 10—10—1961 for your notice by substituted service.

K. P. ANANTHA RAO,
Advocate for Petitioner.

Kasaragod, 4—10—1961.

——

ಕ್ರಿಮಿ ನಾಶಕಗಳು

ಇವನ್ನು ಪ್ರಯೋಗಿಸುವಾಗ ಎಚ್ಚರಿಕೆಯಿಂದಿರಿ!

ಕ್ರಿಮಿನಾಶಕಗಳು ಬೆಂಕಿಯಂತೆ; ಸರಿಯಾಗಿ ಉಪಯೋಗಿಸಿದರೆ ಅದರಂತಹ ಉಪಕಾರ ಮಾಡುವ ವಸ್ತು ಬೇರೊಂದಿಲ್ಲ. ಸ್ವಲ್ಪ ಉದಾಸೀನ ಮಾಡಿದೆವೋ, ತೀರಿತು,—ಮಾಡಬಾರದ ಅನರ್ಥ ಪರಂಪರೆಗಳನ್ನು ತಂದಿಡುತ್ತವೆ.

ಕ್ರಿಮಿನಾಶಕ ವಸ್ತುಗಳಲ್ಲಿರುವ ವಿಷದ ಪ್ರಭಾವಕ್ಕೆ ತುತ್ತಾದ ಅನೇಕರಿಗೆ ಅನೇಕ ವೇಳೆ ಹಾನಿಗಳು ಸಂಭವಿಸಿದುದನ್ನು ಕೇಳಿದ್ದೇವೆ. ಹಾಗೆಂದು, ಕ್ರಿಮಿನಾಶಕಗಳನ್ನು ದೂರವಿರಿಸುವುದಂತೂ ಸಾಧ್ಯವಿಲ್ಲ. ಏಕೆಂದರೆ ಬೆಳೆ ಉತ್ತಮಗೊಂಡು ಫಸಲು ಕೈಸೇರಬೇಕಾದರೆ ಇವು ಅತ್ಯಗತ್ಯ. ಕ್ರಿಮಿನಾಶಕಗಳಿಲ್ಲದಿದ್ದರೆ ರೈತರ ಕೈಮುರಿದಂತೆ.

ಇಂತಹ ವಿಷಪೂರಿತ ಕ್ರಿಮಿನಾಶಕ ವಸ್ತುಗಳನ್ನು ಉಪಯೋಗಿಸುವಾಗ ಕೆಲವು ಎಚ್ಚರಿಕೆ ಕ್ರಮಗಳನ್ನು ವಹಿಸಿದರೆ ಅವುಗಳಿಂದಾಗುವ ದೊಡ್ಡ ಚಿಕ್ಕ ಅಪಾಯಗಳನ್ನು ತಡೆಗಟ್ಟಬಹುದು. ಆ ಕ್ರಮಗಳ ಪೈಕಿ ಕೆಲವು ಮುಖ್ಯವಾದುವುಗಳನ್ನು ಇಲ್ಲಿ ಕೊಡಲಾಗಿದೆ:

(1) ಕ್ರಿಮಿನಾಶಕ ವಸ್ತುಗಳನ್ನು ಮಕ್ಕಳುಮರಿಗಳ ಕೈಗೆ ನಿಲುಕುವ ಜಾಗದಲ್ಲಿಡಬೇಡಿ; ಅವನ್ನು ಪ್ರತ್ಯೇಕ ಜಾಗವೊಂದರಲ್ಲಿ ಭದ್ರಪಡಿಸಿ, ಮನೆಯಲ್ಲಿ ಬಳಸುವ ಔಷಧಿ ಪದಾರ್ಥಗಳೊಂದಿಗೆ ಖಂಡಿತ ಇರಿಸಬೇಡಿ.

(2) ಕ್ರಿಮಿನಾಶಕಗಳಿರುವ— ಡಬ್ಬಿ ಅಥವಾ ಶೀಶೆಗಳ ಮುಚ್ಚಳಗಳನ್ನು ತೆಗೆದಿಡಬೇಡಿ.

(3) ಉಪಯೋಗಿಸುವುದಕ್ಕೆ ಮುಂಚೆ ಡಬ್ಬಿಗಳ ಹೊರಗೆ ಅಂಟಿಸಿರುವ ಲೇಬಲ್ಲುಗಳನ್ನು ಓದಲು ಮರೆಯಬೇಡಿ. ಅಲ್ಲದೆ, ಆ ಲೇಬಲ್ಲುಗಳನ್ನು ಹರಿದುಹಾಕಬೇಡಿ. ಅವುಗಳಲ್ಲಿ ಬರೆದಿರುವ ಸೂಚನೆಗಳನ್ನು ಚಾಚೂ ತಪ್ಪದೆ ಅನುಸರಿಸಿ.

(4) ಕ್ರಿಮಿನಾಶಕಗಳನ್ನು ಬರಿಗೈಯಿಂದ ಮುಟ್ಟುವುದನ್ನು ಸಾಧ್ಯವಾದಷ್ಟು ಮಟ್ಟಿಗೆ ತಡೆಯಿರಿ.

(5) ತುಂಡುಬಟ್ಟೆಗಳನ್ನು ಸುತ್ತಿಕೊಂಡು ಕ್ರಿಮಿನಾಶಕಗಳನ್ನು ಉಪಯೋಗಿಸಬೇಡಿ. ವ್ಯಕ್ತಿಗಳು ಮುಚ್ಚುವಂತೆ ಬಟ್ಟೆ ಹಾಕಿಕೊಂಡು ಕೆಲಸಮಾಡಿ ಆದಾದ ನಂತರ ಸೋಪಿನಿಂದ ವ್ಯಕ್ತಿಗಳನ್ನು ಶುಭ್ರವಾಗಿ ತೊಳೆಯಿರಿ. ಕ್ರಿಮಿನಾಶಕಗಳನ್ನು ಸಿಂಪಡಿಸುವಾಗಾಗಲೀ ಎರಚುವಾಗಾಗಲೀ ತಲೆಗೆ ಬಟ್ಟೆ ಸುತ್ತಿರುವುದು ಒಳ್ಳೆಯದು.

(6) ಗಾಳಿಗೆ ಎದುರಾಗಿ ನಿಂತು ಸಿಂಪಡಿಸಬೇಡಿ; ಮತ್ತು ಸಿಂಪಡಿಸುವಾಗ ಅದಕ್ಕೆ ಅಭಿಮುಖವಾಗಿ ಮುಖಮಾಡಿ ನಿಲ್ಲಬೇಡಿ.

(7) ಸಿಂಪಡಿಸುವ ಕಾರ್ಯದಲ್ಲಿ ತೊಡಗಿರುವಾಗ ತಿಂಡಿತಿನಸುಗಳನ್ನು ತಿನ್ನುವುದಾಗಲೀ, ನೀರು ಕುಡಿಯುವುದು, ಬೀಡಿ ಎಳೆಯುವುದು, ಎಲೆ ಅಗಿಯುವುದು ಇತ್ಯಾದಿಗಳನ್ನು ಮಾಡಕೂಡದು.

(8) ಸಿಂಪಡಿಸಿ ಆದ ಮೇಲೆ ಬಟ್ಟೆಗಳನ್ನು ತೆಗೆದು ಶುಭ್ರವಾಗಿ ಒಗೆಯಬೇಕು. ಆ ಬಟ್ಟೆಗಳನ್ನು ಇತರ ಬಟ್ಟೆಗಳೊಂದಿಗೆ ಬೆರಸಕೂಡದು.

ಸಿಂಪಡಿಸುವ ಕೆಲಸ ಮುಗಿದ ನಂತರದಲ್ಲಿ ತಲೆ ನೋಯುವುದಾಗಲಿ, ತಲೆ ತಿರುಗುವುದಾಗಲಿ ತೋರಿಬಂದರೆ ಕ್ರಿಮಿನಾಶಕಗಳ ಸೋಂಕು ತಗುಲಿದೆ ಎಂದು ತಿಳಿಯಬಹುದು. ಕ್ಷಿಪ್ರದಲ್ಲಿಯೇ ವಾಂತಿಯಾದರೂ ಆಗಬಹುದು. ಈ ಸೂಚನೆಗಳು ಕಂಡುಬಂದೊಡನೆಯೇ ಡಾಕ್ಟರಲ್ಲಿಗೆ ಹೋಗಿ; ಕೇವಲ ತಲೆನೋವೆಂದು ಉದಾಸೀನರಾಗಬೇಡಿ; ಅದು ವಿಷದ ಸೋಂಕಿನ ಆರಂಭದ ಚಿಹ್ನೆಯಷ್ಟೆ.

ವಿಷದ ಸೋಂಕು ಚರ್ಮಕ್ಕೇನಾದರೂ ತಗುಲಿದ್ದರೆ, ತೊಟ್ಟಿರುವ ಬಟ್ಟೆಗಳನ್ನು ಕಳಚಿ ಶುಭ್ರವಾಗಿ ಸ್ನಾನಮಾಡಿ. ಕಣ್ಣುಗಳಿಗೇನಾದರೂ ತಗುಲಿದ್ದರೆ ಬೊಗಸೆಗಳಲ್ಲಿ ತಿಳಿನೀರನ್ನು ತೆಗೆದುಕೊಂಡು ಕಣ್ಣುಗಳನ್ನು ನೀರಿನಲ್ಲಿ ಮುಳುಗಿಸಿ ರೆಪ್ಪೆಗಳನ್ನು ಮುಚ್ಚಿ ತೆಗೆದು ಮಾಡುತ್ತಾ ತೊಳೆಯಿರಿ. ವಿಷವಸ್ತುವು ಹೊಟ್ಟೆಗೆ ಸೇರಿದ್ದರೆ, ಉಪ್ಪಿನ ನೀರನ್ನು ಎರಡು ಮೂರು ಬಾರಿ ಕುಡಿದು ವಾಂತಿಯಾಗುವುದಕ್ಕೆ ಉತ್ತೇಜನಕೊಡಿ. ಈ ಕ್ರಮಗಳು ಡಾಕ್ಟರು ಬರುವ ಮುಂಚೆ ಅನುಸರಿಸಬೇಕಾದವುಗಳು.

ಡಾಕ್ಟರು ಬಂದ ಕೂಡಲೆ ವಿಷದ ಸೋಂಕು ಯಾವ ಕ್ರಿಮಿನಾಶಕದಿಂದ ತಗುಲಿದೆಯೆಂಬುದನ್ನು ಅವರಿಗೆ ತಿಳಿಸಿ. ಕ್ರಿಮಿನಾಶಕ ಡಬ್ಬಿಯ ಮೇಲಿರುವ ಲೇಬಲ್ಲನ್ನು ಅವರಿಗೆ ತೋರಿಸಿ. ಅನೇಕ ವೇಳೆ, ವಿಷದ ಸೋಂಕನ್ನು ತಡೆಗಟ್ಟುವ ಪ್ರಥಮ ಚಿಕಿತ್ಸಾವಿಧಾನಗಳನ್ನು ಆ ಲೇಬಲ್ಲುಗಳೇ ಸೂಚಿಸುತ್ತವೆ.

(ಭಾರತ ಕೃಷಿ ಸಂಶೋಧನಾ ಸಂಸ್ಥೆ, ದಿಲ್ಲಿ ಇವರ ಪ್ರಕಟಣೆ.)

———

ತುಳು ಸಂಧಿಯ ಕತೆ: ೮

ಓಯೆ ಮಹಾಲಿಂಗ ಸೆಟ್ಟಿ

ಓಲೆಯನ್ನು ಮಾಣಿ ತರುವಾಗ, ಓಯೆ ಮಹಾಲಿಂಗ ಸೆಟ್ಟಿಯು ಗದ್ದೆಯ ಕಡಿ ಕಡಿಯುತ್ತಿದ್ದ. ಓಲೆ ತೆಕ್ಕೊಂಡು ಓದಿದ. ಅದರಲ್ಲಿ ಈ ರೀತಿ ಆಜ್ಞಾಪಿಸಲಾಗಿತ್ತು:

"ವೈರಿಗಳ ದಂಡು ನಾಲ್ಕು ಮೂಲೆಗಳಿಂದ ಆಕ್ರಮಿಸಿದೆ. ಸೇನೆಗೆ ಜನಮಾಣಿ ಕೂಡಿಸಿ ಕೂಡಲೇ ಹೊರಟು ಬರುವುದು. ಇದಕ್ಕೆ ತಪ್ಪಿದರೆ ನಿನ್ನ ರಾಜ್ಯಕೋಶ, ಭೂಮಿ, ಸೀಮೆ ಬಿಟ್ಟುಕೊಡಬೇಕಾದೀತು."

ಈ ಓಲೆಯನ್ನು ಹಿಡಿದುಕೊಂಡು ಸೆಟ್ಟಿಗೆ ತನ್ನ ಅರಮನೆಗೆ ಬಂದ. ಹಾಳೆಯನ್ನು ಮೂಲೆಗೆ ಎಸೆದ. ಒಳಗೆ ಪ್ರವೇಶಿಸಿ ತನ್ನ ತಾಯಿ ಊಂಜಿ ಹೆಂಗ್ಸಿಗೆ ನುಡಿದ:

"ತಾಯೀ, ನನಗೆ ದಂಡಿನ ಕರೆ ಬಂದುಕೊಂಡಿತು. ನಾಲ್ಕು ದಿಕ್ಕಿನಿಂದ ವೈರಿ ಪಡೆ ಮುನ್ನುಗ್ಗಿದೆ. ನಾನು ಸುಮ್ಮಗೆ ಕೂತೆನಾದರೆ, ನಾಳೆ ನನ್ನ ರಾಜ್ಯಕೋಶ, ಭೂಮಿ, ಸೀಮೆಗಳನ್ನೆಲ್ಲ ಬಿಟ್ಟುಕೊಡಬೇಕಾದೀತು. ಹಾಗೆ ರಾಜಾಜ್ಞೆ ಉಂಟು. ನಾನು ದಂಡಿಗೆ ಹೊರಡುತ್ತೇನೆ. ನನಗೆ ಮಿತ್ರರು ಕಡಿಮೆ, ಶತ್ರುಗಳು ಅಧಿಕ. ನನ್ನ ಮದುಮಗಳು ನಿಮ್ಮ ಸೊಸೆ—ಒನ್ನುವನ್ನು ನೆರೆಕರೆಗೆ ಹೋಗಬಿಡಬೇಡಿ. ತಂಬಿಗೆ ಕೊಟ್ಟು ಅವಳನ್ನು ನೀರಿಗೆ ಕಳುಹಿಸಬೇಡಿ. ಚಿಪ್ಪು ಕೊಟ್ಟು ಬೆಂಕಿಗೆ ಕಳುಹಿಸಬೇಡಿ. ಅವಳು ಸೂತಕವಾದರೆ, ಬೂಡಿಗೆ ದೂರ, ಅಂಗಳಕ್ಕೆ ಸಮೀಪ, ಆಗಸರ ಕೆರೆಗೆ ಅವಳನ್ನು ಮೀಯಲು ಕಳುಹಿಸಬೇಡಿರಿ. ನಾನು ತೋಡಿದ ಕೆರೆ ಉಂಟು. ಅದರಲ್ಲಿ ಮಿಂದು ಶುದ್ಧವಾಗಲಿ. ಆ ಶುದ್ಧ ಸಾಕಾಗದಿದ್ದರೆ ಕೆಂದೆಂಗಿನಿಂದ ಸಾವಿರ ಸೀಯಾಳ ತೆಗೆದು, ಅದರ ಎಳನೀರಿನಿಂದ ಮಿಂದು ಶುದ್ಧ ಮಾಡಿಕೊಳ್ಳಲಿ. ಅದೂ ಬೇಡವಾದರೆ ಕಬೇತಿ ದನ ಇಲ್ಲವೆ ಸೊನ್ನೆ ಹಾಲ ಎಮ್ಮೆ ಉಂಟು. ಅವುಗಳ ಹಾಲು ಕರೆದು, ಅದನ್ನು ಹೊಯ್ದು ಮಿಂದುಕೊಂಡು ಶುದ್ಧ ಮಾಡಿಕೊಳ್ಳಲಿ. ನನಗೆ ದಂಡಿಗೆ ಬೇಗ ಹೊರಡಬೇಕು. ಊಟ ಸಿದ್ಧ ಮಾಡಿರಿ."

ಮಹಾಲಿಂಗ ಸೆಟ್ಟಿ ತನ್ನ ಹೆಂಡತಿ ಒನ್ನು ಬಳಿಗೆ ಸಾರಿ, ತನಗೆ ಬಂದ ದಂಡಿನಾಜ್ಞೆಯನ್ನು ತಿಳಿಸಿದನು. ತನಗೆ ಸ್ನಾನಕ್ಕೆ ಸಿದ್ಧಮಾಡಲು ಸೂಚಿಸಿದನು.

ಸೀಗೆ ಭಾಗ್ಯ, ಬೈಲು ಬಳಪು, ಬಿಟ್ಟು ತರೋಳಿ ಕುಟ್ಟಿ ಮೊತ್ತಗೆ ಮಾಡಿ ಮರಿಗೆಯಲ್ಲಿ ಹಾಕಿದಳು. ಗಂಡನ ಮೈಗೆ ಎಣ್ಣೆ ಸವರಿದಳು. ಬಚ್ಚಲಿಗೆ ನಡೆದನು. ಬಿಸಿ ನೀರು ಹೊಯ್ದು ಬೆಚ್ಚಗಾದನು. ತಣ್ಣೀರು ಎರಚಿಕೊಂಡು ತಂಪಾದನು.

ಅಲ್ಲಿಂದ ಬಂದನು. ಅಡ್ಡ ಧೋತ್ರ ಉಟ್ಟನು. ತುಳಸಿಕಟ್ಟೆಗೆ ಬಂದನು. ತುಳಸಿ ತೀರ್ಥ ತೆಕ್ಕೊಂಡನು. ಮೂರು ಸುತ್ತು ಪ್ರದಕ್ಷಿಣೆ ಬಂದನು. ಹಣೆಗೆ ಸೂರ್ಯ ಬೊಟ್ಟು ತಿಲಕಿಸಿದ. ತುಳಸಿ ಮುಟ್ಟಿ ತೀರ್ಥ ತೆಕ್ಕೊಂಡನು. ಭಕ್ತಿಗೆ "ಬುಗುತಿ" (ಭಸ್ಮ) ತೊಡೆದನು.

ಒನ್ನು ಹಡೆಯ ಮಣೆ ಇಟ್ಟಳು. ಬಂಗ ಬಾಳೆಯ ತುದಿ ಎಲೆ ತುಂಡು ಹಾಸಿದಳು. ಹೊಟ್ಟೆಲೆ ಹುಡಿ ಮಾಡಿ ಮಹಾಫಲದ ಉಪ್ಪಿನಕಾಯಿ ಹಾಕಿದಳು. ಬೆಳ್ತಿಗೆ ಅಕ್ಕಿಯ ಹುಡಿ "ಬವಣ" (ಅನ್ನ) ತಂದು ಇಕ್ಕಿದಳು. ಉಪ್ಪು ಹುಳಿ ಬೆರಸಿದ ಹಲವು ಬಗೆ ಪದಾರ್ಥ ಬಡಿಸಿದಳು. ಕೊಬ್ಬರಿ ಬೆರಸಿದ ವಿವಿಧ ಬಗೆ ಬಡಿಸಿದಳು. ನೀಲಿ ವರ್ಣದ ತುಪ್ಪ ಹೊಯ್ದಳು. ಪಚ್ಚೆ ವರ್ಣದ ಎಣ್ಣೆ ಸುರಿದಳು. ಗಂಡನ ಊಟವಾಯಿತು. ಮಡಿ ಸವರಿದಳು.

ಸೆಟ್ಟಿ ದುಸ್ತು ಅಲಂಕಾರಕ್ಕೆ ತೊಡಗಿದ. ಬಂದಿಗಟ್ಟಿ ಧೋತ್ರ, ತಲೆಗೆ ರುಮಾಲು, ಬಂಗಾರಿನ ಬಳೆ, ಮುಂಗೈ ಸರಪಳಿ, ಸೊಂಟದ ಎಳೆದಾರ ಮತ್ತು ಮುದ್ರೆಯ ಉಂಗುರ—ಇವನ್ನೆಲ್ಲ ಒನ್ನು ಗಂಡನಿಗೆ ಒದಗಿಸಿ, ಅವನನ್ನು ಸಿಂಗರಿಸಿದಳು. ಭಯ ನಿವಾರಣಕ್ಕೆ ಕೊರಳಿಗೆ ಚಿನ್ನದ ತಾಯಿತದ ಸರಮಾಲೆ, ಗೆಲುವಿಗೆ ಗೆಲವಂದ ಮಾಲೆ ತೊಡಿಸಿದಳು. ಒನ್ನು ಬಿಕ್ಕಿ ಬಿಕ್ಕಿ ಅಳುವಳಂತೆ.

ಸೆಟ್ಟಿಯು ಹೆಂಡತಿಯ ಕಣ್ಣೀರನ್ನು ತನ್ನ ರುಮಾಲಿನ ತುದಿಯಿಂದ ಒರಸುತ್ತ ನುಡಿದನು:

"ಒನ್ನೋ, ಅಳಬೇಡ. ನಿನ್ನ ಪುಣ್ಯದಿಂದ, ನಕ್ಷತ್ರದಿಂದ, ದೇವರ ದಯೆಯಿಂದ ಬೇಗನೇ ದಂಡು ಸಾಧಿಸಿ ಬರುವೆನು. ನೀನು ನೆರೆಕರೆಗೆ ಮಾತ್ರ ಸುಳಿಯಬೇಡ...."

ಸೂತಕವಾದರೆ ಏನು ಮಾಡಬೇಕೆಂಬುದನ್ನು, ತಾಯಿಗೆ ತಿಳಿಸಿದ ಪ್ರಕಾರ ಈಕೆಗೂ ನಿಯುಕ್ತಿಸುವನು.

ಇತ್ತ ಊಂಜಿ ಹೆಂಗ್ಸು ಉಪ್ಪು ಕರಟಿಸಿದಳು. ಅದನ್ನು ಹೂಜಿಗೆ ತುಂಬಿಸಿದಳು. ಗದ್ದೆಯ ಬ್ರಹ್ಮಿ, ಬಾಳೆಹೂವಿನ ಎಸಳು ತಂದು ಒಟ್ಟಿಗೆ ಕಡೆದು ಚಟ್ಣಿ ಮಾಡಿದಳು ಎಲೆಯಲ್ಲಿ ಪೊಟ್ಟಣ ಕಟ್ಟಿದಳು. ಅನ್ನದ ಬುತ್ತಿಯಲ್ಲಿ ಇದನ್ನೆಲ್ಲ ತುಂಬಿಸಿದಳು.

ಇದನ್ನು ತೆಗೆದುಕೊಂಡು ಬಂದು ಮಗನಿಗೆ ಕೊಟ್ಟಳು. ಆಗ ತಾಯಿಗೆ ಸೆಟ್ಟಿ ಪುನಃ ಹೀಗೆ ತಾಕೀದು ಕೊಡುವನು.

"ಒಂದು ವರುಷ ಆರು ತಿಂಗಳ ದಂಡು ಸಾಗಾಣೆಯನ್ನು ಮೂರು ತಿಂಗಳಲ್ಲಿ ಮುಗಿಸಿ ಹಿಂತಿರುಗುವೆನು. ಒನ್ನು ಸೂತಕವಾದರೆ, ನಾನು ಸೂಚಿಸಿದ ಪ್ರಕಾರ ನಡೆದುಕೊಳ್ಳಲು ಮರೆಯಬೇಡಿರಿ. ಜೋಕೆ ಜಾಗ್ರತೆಯಲ್ಲಿ ಇದ್ದುಕೊಳ್ಳಿರಿ. ಸೊಸೆಗೆ ಬುದ್ಧಿ ನೀತಿಯನ್ನು ಹೇಳುತ್ತಿರಿ."

ಹೆಂಡತಿ ನೀಡಿದ ಖಡ್ಗ ಬಿಲ್ಲು ಪಗರಿಗಳನ್ನು ಧರಿಸಿದನು. ಅವಳ ಗಲ್ಲವನ್ನೊಮ್ಮೆ ಮೆಲ್ಲೆಯಿಂದ ಅಮುಕಿದ. ಎಲ್ಲರನ್ನು ಬೀಳ್ಕೊಟ್ಟು ಹೊರಡುವ.

ಆ ದಿನ ಸರಿಯಿತು. ಮರುದಿನ ಎದ್ದವಳಿಗೆ—ಒನ್ನುಗೆ ಸೂತಕ. ಸೂತಕದ ನಾಲ್ಕನೆ ದಿನ ಅತ್ತೆಯನ್ನು ಕರೆದು ನುಡಿದಳು.

"ಅತ್ತೆಮ್ಮಾ, ನನಗೆ ಮೀಯಬೇಕು."

"ನಿನ್ನ ಮುದುಮಗ ಕೋಡಿಸಿದ ಕೆರೆ ಉಂಟು; ಅದರಲ್ಲಿ ಮಿಂದು ಶುದ್ಧವಾಗಿಕೋ. ನಿನ್ನ ಗಂಡ ಹೇಳಿದ್ದಾನೆ."

"ಆ ಶುದ್ಧ ಸಾಲದು ಅತ್ತೆಮ್ಮನವರೇ".

"ಸೀಯಾಳದ ಎಳನೀರಿನಿಂದ ಜಲಕ ಮಾಡಿಕೋ."

"ಅದೂ ಒಲ್ಲೆ. ಶುದ್ಧಕ್ಕೆ ಸುಳಿನೀರಿನಲ್ಲಿ ಮಿಯಬೇಕು. ಕೆಳಗಿನ ಕಟ್ಟದಲ್ಲಿ ಮುಳುಗಿ ಮೇಲಿನ ಕಟ್ಟದಲ್ಲಿ ತಲೆ ಎತ್ತಬೇಕು. ನಾನು ಅಗಸರ ಕೆರೆಗೆ ಹೋಗ್ತು ಹೋಗುತ್ತೇನೆ, ಅತ್ತೆಮ್ಮನವರೇ.॥

"ಓ ದೇವರೇ! ನನ್ನನ್ನು ಅವನ ಕೋಪಕ್ಕೆ ಬಲಿಮಾಡಬೇಡ. ಕಜೇತಿ, ಸೊನ್ನೆ ಹಾಲ ಎಮ್ಮೆ ಉಂಟು, ಅದರ ಹಾಲಿಂದ ಶುದ್ಧ ಮಾಡಿಕೋ. ನಿನ್ನ ಖುಷಿ ಬಂದ ಹಾಗೆ ನಡೆದು ನನ್ನನ್ನು ಅಪಕೀರ್ತಿಗೆ ಸಿಲುಕಿಸಬೇಡ. ನಿನ್ನ ಗಂಡ ತೀವ್ರ ಉಚ್ಚರಿಸಿ ಹೋಗಿದ್ದಾನೆ."

ಅತ್ತೆ ಹೇಳಿದಳು, ಬುದ್ಧಿನೀತಿ ದುಡಿದಳು, ಗದರಿಸಿದಳು--ಎಲ್ಲಾ ಮಾಡಿದಳು: ಒನ್ನು ಉದ್ದಕ್ಕೂ ಚಂಡಿಹಿಡಿದಳು. ಹೋಗುವುದೇ ಸಿದ್ಧ ಎಂತ ತುದಿಗಾಲಿನಲ್ಲಿ ನಿಂತಳು.

ನಿರುಪಾಯಳಾಗಿ ಅತ್ತೆ ಕೊನೆಗೆ, ಅಗಸರ ಚೆಲುವೆಗೆ ಕರೆಕಳುಹಿಸಿದಳು.

ಚೆಲುವೆ ಬಂದಳು.

ಅವಳಿಗೆ ಉಂಜಿ ಹೆಂಗ್ಸು ತಿಳಿಸಿದಳು.

"ನೋಡಿದೆಯಾ? ಸೂತಕದ ನನ್ನ ಸೊಸೆ ಅಗಸರ ಕೆರೆಗೆ ಹೋಗಿ ಮಿಯಬೇಕೆಂದು ಹಠತೊಟ್ಟಿದ್ದಾಳೆ. ಗಂಡನ, ಅತ್ತೆಯ ಮಾತನ್ನು ಇನ್ಕಾರಿಸಿ ಹೋಗುತ್ತೇನೆ ಅನ್ನುತ್ತಾಳೆ."

"ಈಗಿನ ಹೆಣ್ಣುಗಳು ಮನೆಯಲ್ಲಿ ಕೂತುಕೊಳ್ಳುತ್ತದಾ? ಅದರಿಂದೇನೂ ಕೆಡುಕಾಗದು: ಎಷ್ಟೋ ಹೆಂಗಸರು ಹೋಗುತ್ತಾರೆ. ಅಗಸರ ಕೆರೆಯಲ್ಲಿ ಶುದ್ಧಕ್ಕೆ ಸುಳಿ ನೀರು, ಕಲುಷಕ್ಕೆ ಕಲುಷ ನೀರು ಮಿಂದು ಬರುತ್ತಾರೆ."

"ಏನೋ ನಾನೊಲ್ಲೆ?"

ಹೀಗೆ ಹೇಳಿ, ಮನಸ್ಸಿಲ್ಲದ ಮನಸ್ಸಿನಿಂದ ಸೀಗೆ ಭಾಗ್ಯೆ, ಬೈಲ ತರೋಳಿ ಸಂಪು, ಬಿಟ್ಟದ ಸಾರೋಳಿ ಒಟ್ಟಿಗೆ ಕಟ್ಟಿ ಮೆತ್ತಿ ಕಂಚಿನ ಮರಿಗೆಗೆ ಸುರಿದು ಚೆಲುವೆಯನ್ನು ನಂಬಿ, ಸೊಸೆಯ ಕಾವಲಿಗೆ ನೇಮಿಸಿ, ಸೊಸೆಯನ್ನು ಹೋಗಗೊಟ್ಟಳು.

ಒನ್ನು ಚೆಲುವೆಯೊಂದಿಗೆ ಹೊರಟಳು. ಅಗಸರ ಕೆರೆಗೆ ಬಂದಾಗ, ಅದರ ಮಹಾರದ ತಡಿಬಾಗಿಲಲ್ಲಿ ನಿಂತಿದ್ದಾನೆ—ಚೆಲುವಾಂಗನೆಯರ ಚೋರ, ಅಡ್ಡ ಹೆಸರು ಗಳಿಸಿದ ತರುಣರ ವಸಂತರಾಯ!

"ತಡಿ ಬಾಗಿಲಿನಿಂದ ಆಚೆ ಸರಿಯಿರಿ. ನಾವು ಅಗಸರ ಕೆರೆಗೆ ಹೋಗುವವರು. ಶುದ್ಧಕ್ಕ ಸುಳಿನೀರು ಮಿಯಲಿಕ್ಕೆ ಹೋಗುತ್ತಿದ್ದೇವೆ. ದಾರಿ ಬಿಡಿರಿ" ಎಂದಳು ಚೆಲುವೆ ಅವನಿಗೆ.

ಅಲ್ಲಿಂದ ತೆರಳಿ, ಅನತಿ ದೂರ ನಿಂತು ಚೆಲುವೆಯನ್ನು ಕೈಸನ್ನೆಯಿಂದ ರಾಯ ಕರೆದ.

"ಕೊಂಚ ಇಲ್ಲಿ ನಿಂತಿರಿ. ಈಗೊಂದು ಕ್ಷಣದಲ್ಲಿ ಬರುತ್ತೇನೆ".

ಹೀಗೆಂದು ಒನ್ನುಗೆ ನುಡಿದು, ರಾಯನೆಡೆಗೆ ಚೆಲುವೆ ಒತ್ತರದಿಂದ ಸಾರಿದಳು.

"ಬರುವಾಗ ಬರಲಿಕ್ಕೆ ಕೂಡೀತಾ?"

"ಏಕೆ?"

ಚೆಲುವೆಯ ಕಿವಿಯಲ್ಲಿ ಉಸುರಿದನು.

ಚೆಲುವೆ ಹಿಂತಿರುಗಿ ಬಂದು, ಒನ್ನುವನ್ನು ಕೂಡಿಕೊಂಡಳು. ಇಬ್ಬರೂ ಅಗಸರ ಕೆರೆಗೆ ತಲಪಿದರು. ಒನ್ನು ಮಿಂದು ಶುಚಿಭೂತೆಯಾಗುವಳು.

ತರುವಾಯ ಇಬ್ಬರೂ ಹೊರಳಿದರು. ನೇರ ದಾರಿಯನ್ನು ತೊರೆದು, ಚೆಲುವೆ ಅಡ್ಡದಾರಿಯಲ್ಲಿ ಒನ್ನುವನ್ನು ಕರೆದ್ಯೊಯ್ದಳು, ಒನ್ನು ವಿಚಾರಿಸಿದಳು:

"ಈ ದಾರಿಯಲ್ಲೇಕೆ ಕರೆದ್ಯೊಯ್ಯುವೆ?"

"ವಸಂತರಾಯರ ಉಪ್ಪರಿಗೆಗೆ ಹೋಗುವ. ಅಲ್ಲಿ ತೆಂಗಿನಕಾಯಿ, ತಪ್ಪಂಗಾಯಿ, ಅಡಿಕೆಯ ದೂದು, ಗುಬ್ಬಿಗಳ ನರ್ತನ, ಕುಡುಂಬಿಗರ ಕೋಲಾಟ ಇವೆ. ಹೋಗಿ ಅವನ್ನೆಲ್ಲ ನೋಡಿ ಬರೋಣ; ಆಗದೇ?"

ಹೀಗೆಂದು ಪುಸಲಾಯಿಸಿದಳು ಚೆಲುವೆ.

ಇಬ್ಬರೂ ವಸಂತರಾಯನ ಉಪ್ಪರಿಗೆ ಮನೆಯ ಹಿಂಬಾಗಿಲಿಗೆ ಬಂದರು. ತೆರೆದ ಬಾಗಿಲೊಳಗೆ ಇಬ್ಬರೂ ಪ್ರವೇಶಿಸಿದರು.

ಆಗ ಚೆಲುವೆ ಒಳಗೆ ಒನ್ನುವೊಬ್ಬಳನ್ನೇ ಬಿಟ್ಟು, ದಿಗ್ಗನೇ ಹೊರಗೆ ಬಂದಳು. ಬಾಗಿಲು ಇಕ್ಕಿದಳು. ಹೊರಗೆ ಅಲ್ಲಿ ಕೈಯಲ್ಲಿ ಚೀಲ ಹಿಡಿದುಕೊಂಡು ವಸಂತರಾಯ ಪ್ರತ್ಯಕ್ಷನಾಗಿದ್ದ!

"ತೆಕ್ಕೊ ನಿನ್ನ ಬಹುಮಾನ!"

ಎಂದುಸುರಿ, ಒಂದು ಕಳಸಿಗೆ ನಾಣ್ಯದ ಚೀಲವನ್ನು ಚೆಲುವಯ ಕೈಗೆ ನೀಡಿದ.

ಚೆಲುವೆ ಗಂಟನೊಂದಿಗೆ ಆ ಸ್ಥಳವನ್ನು ಬಿಟ್ಟು, ತನ್ನ ಮನೆಗೆ ಬಂದು ಸೇರಿದಳು.

ಇತ್ತ ಅತ್ತೆ ಉಂಜಿ ಹೆಂಗ್ಸು ಸೊಸೆ ಈಗ ಬರುವಳು, ಮತ್ತೆ ಬರುವಳು ಎಂದು ದಾರಿ ನೋಡುತ್ತಿದ್ದಳು. ಕೊನೆಗೆ ತಬ್ಬಿಬ್ಬಾಗಿಕೊಂಡು ಚೆಲುವೆಯ ಮನೆಗೆ ಹೋದಳು! ಚೆಲುವೆಯನ್ನು ಕಂಡು ತನ್ನ ಸೊಸೆ ಎಂದು ಗಡಿಬಿಡಿಯಿಂದ ವಿಚಾರಿಸಿದಳು.

"ತೆಂಗಿನಕಾಯಿಯ ತಪ್ಪಂಗಾಯಿ, ಅಡಿಕೆಯ ದೂದು, ಗುಬ್ಬಿಗಳ ನರ್ತನ ಇವೆ. ನೋಡಿಬರುವೆನೆಂದುಕೊಂಡು ವಸಂತರಾಯನ ಮಾಳಿಗೆಗೆ ಹೋದರು. ಹೋದವರನ್ನು ಅತ ಬರಲಿಕ್ಕೆ ಬಿಡಲಿಲ್ಲ. ನೀವು ಏನು ಹೇಳುತ್ತೀರಿ? ಈಗಿನ ಹೆಣ್ಣುಗಳು ಹೋಗುವಂತೆ ಬರುತ್ತದಾ? ಮನೆಯಲ್ಲಿ ಹೆಣ್ಣುಗಳು ಸೊಕ್ಕಿದರೆ ಕೂತಾವಾ? ಹಳ್ಳದಲ್ಲಿ ನೀರು ತುಂಬಿದರೆ ಕಪ್ಪೆಗಳು ಕೂತಾವಾ?"

ಹೀಗೆಂದು ಚೆಲುವೆ ಕಪಟೋಕ್ತಿಯನ್ನೊರೆದಳು.

ಅಲ್ಲಿಂದ ಉಂಜಿ ಹೆಂಗ್ಸು ನೆಟ್ಟಗೆ ಅರಮನೆಗೆ ಬಂದುಬಿಟ್ಟಳು.

ಮೂರು ತಿಂಗಳು ದಾಟುವಾಗ, ದಂಡು ಸಾಧಿಸಿ ಓಯೊ ಮಾಲಿಂಗ ಸೆಟ್ಟಿ ತನ್ನ ಸೀಮೆಗೆ ಮರಳಿದನು.

ಕೈಯಲ್ಲಿ ಹೂವಿನ ಚೆಂಡು, ಸೀರೆ, ರವಕ್ಕೆ ಕಣ, ಚಿನ್ನದ ಮಣಿಸರ ಹಿಡಿದುಕೊಂಡು ಗೆಲು ಹುಮ್ಮಸ ತುಂಬಿದ ನಡಿಗೆಯಿಂದ ಅರಮನೆಯಭಿಮುಖವಾಗಿ ಬರುತ್ತಿದ್ದ. ಪಡುಪಿನಲ್ಲಿ ಬರುವಾಗ, ಅಲ್ಲಿ ದನಮೇಯಿಸುವ ಹುಡುಗರು ತಮ್ಮಷ್ಟಕ್ಕೆ ಮಾತಾಡಿಕೊಳ್ಳುತ್ತ,

"ನಿನ್ನೆ ಮಾಲಿಂಗ ಸೆಟ್ಟಿ ದಂಡಿಗೆ ಹೋದ, ಈವತ್ತು ಅವನ ಹೆಂಡ್ತಿ ವಸಂತರಾಯನ ಮಾಳಿಗೆಯಲ್ಲಿ!"

ಹೀಗೆಂದು ಗೇಲಿಮಾಡಿ ನಗುತ್ತಿದ್ದರು.

ಈ ಮಾತು ಕೇಳಿದ ಮಾಲಿಂಗ ಸೆಟ್ಟಿಗೆ ಭೂಮಿ ಕುಸಿದು ಆಕಾಶ ಪಾತಾಳವಾದಂತಾಯಿತು!

ದಡದಡನೆ ಅರಮನೆಗೆ ಧಾವಿಸಿ ಬಂದ. ತಾಯಿಯನ್ನು ವಿಚಾರಿಸಿದ.

ನಡೆದ ಅವಾಂತರವನ್ನು ತಾಯಿ ನಿರೂಪಿಸಿ, ಮುಂದರಿದು ತಿಳಿಸಿದಳು:

"ತನ್ನ ಹಠವನ್ನೇ ಸಾಧಿಸಿ, ನಿನ್ನ ಹೆಂಡತಿ ಅಗಸರ ಕೆರೆಗೆ ಹೋದಳು. ಚೆಲುವೆಯ ಒತ್ತಾಸೆ ಬೇರೆ ಅವಳಿಗೆ. ವಸಂತರಾಯನ ಮಾಳಿಗೆಗೆ ಒಯ್ದು, ಅಲ್ಲಿ ಬಿಟ್ಟು, ಅವನಿಗೆ ಕೊಟ್ಟು ಬಂದವಳೇ ಚೆಲುವೆ!"

"ಆದೀತು, ಹೋಗಲಿ ಅವಳು!"

ಹೀಗೆಂದು ನುಡಿದು, ಮಾಲಿಂಗ ಸೆಟ್ಟಿ ತಾನು ತಂದ ಪಾರಿತೋಷಕಗಳನ್ನೆಲ್ಲ ಮೂಲೆಗೆ ಒಗೆದನು.

ಮರುದಿನ ನೇರ ಬೆಳಗಾತ ಎದ್ದನು. ಬಳೆಗಾರನ ಅಂಗಡಿಗೆ ನಡೆದನು. ಮಾಲೆ ಮಾಲೆ ಬಳೆಗಳನ್ನು ಕೊಂಡುಕೊಂಡನು. ಹಿಂದೆ ಬಂದನು. ಬಳೆಗಾರನ ವೇಷ ತೊಟ್ಟನು. ವಸಂತರಾಯನ ನಿವಾಸದತ್ತ ನಡೆದನು. ಅಲ್ಲಿ ಹೆಬ್ಬಾಗಿಲಿನಲ್ಲಿ ನಿಂತು ಬೆಸಗೊಂಡನು.

"ಯಾರಪ್ಪಾ ಇಲ್ಲ ಬಳೆ ಇಡುವವರು? ಒಳ್ಳೆ ಒಳ್ಳೆ ಬಳೆಗಳಿವೆ. ಬಂಗಾರದ ಎಡೆಯಲ್ಲಿ ಒಂದೊಂದು ಸಿಕ್ಕಿಸಿದರೆ ಬಲು ಅಂದ ಕಾಣುವುದು. ಯಾರಮ್ಮಾ? ಬಳೆ ಬೇಕೇ?"

ವಸಂತರಾಯ ಒನ್ನುವನ್ನು ಕರೆದು ಕೇಳಿದ:

"ಒನ್ನೋ, ಬಳೆ ಇಡುತ್ತಿಯಾ? ಒಳ್ಳೆ ಒಳ್ಳೆ ಬಳೆ ಉಂಟಂತೆ. ಇಟ್ಟುಕೋ."

"ನನಗೆ ಬೇಡ. ನನಗೆ ಚಿನ್ನದ ಬಳೆಗಳು ಇದ್ದವುಗಳೇ ಸಾಕು."

ಈಕೆಯ ಔದಾಸೀನ್ಯತೆಯನ್ನು ಗಮನಿಸಿ, ಬಳೆಗಾರನು ತನ್ನ ಬಳೆಗಳನ್ನು ಮೇಲಿಂದ ಮೇಲೆ ಪ್ರಶಂಸಿಸುತ್ತ, ಒತ್ತಾಯದ ಮೇಲೆ ಒತ್ತಾಯ ಉರುಳಿಸುವನು.

(ಸಶೇಷ)

——

ನಮ್ಮ ಜಿಲ್ಲೆ

ಕಾವ್ಯರಾವು ಕಾರ್ಯಕ್ರಮ: ಉಡುಪಿ ಎಂ. ಜಿ. ಎಂ. ಕಾಲೇಜಿನ ಭಾಷಾ ಸಂಘದ ಆಶ್ರಯದಲ್ಲಿ ಕಳೆದ ತಾ. 29 ರಂದು ಕಾವ್ಯರಾವು ಕಾರ್ಯಕ್ರಮವು ಪ್ರೊ| ಕು. ಶಿ. ಹರಿದಾಸ ಭಟ್ ಎಂ. ಎ. ಅವರ ಅಧ್ಯಕ್ಷತೆಯಲ್ಲಿ ಜರಗಿತು. ವಿದ್ಯಾರ್ಥಿಗಳಾದ ಸರ್ವಶ್ರೀ ನಿರಂಜನ ಆಚಾರ್ಯ ಬಿ. ಆರ್. ವಾಸುದೇವ ಕಾಮತ್, ಬಿ. ಪದ್ಮನಾಭ ಭಟ್ ಮತ್ತು ಎನ್. ನಾರಾಯಣ ಬಲ್ಲಾಳರು ತಾವೇ ಬರೆದ ಹರಟೆ, ಕವಿತೆ ಹಾಗು ಕಥೆಯನ್ನು ಓದಿ ಹೇಳಿದರು.

ಗಾಂಧಿ ವಿಚಾರ ಗೋಷ್ಠಿ: ಉಡುಪಿ ಎಂ. ಜಿ. ಎಂ. ಕಾಲೇಜ್ ಯೂನಿಯನಿನ ಆಶ್ರಯದಲ್ಲಿ ಗಾಂಧಿ ಜಯಂತಿಯ ಅಂಗವಾಗಿ ವಿಚಾರಗೋಷ್ಠಿಯೊಂದು ಯೂನಿಯನ್ ಅಧ್ಯಕ್ಷ ಶ್ರೀ| ಎನ್. ನಾರಾಯಣ ಬಲ್ಲಾಳರ ಅಧ್ಯಕ್ಷತೆಯಲ್ಲಿ ಜರಗಿತು

ಪ್ರೊಹಿಬಿಷನ್ ದಾಳಿ: ಕಳೆದ ಸಪ್ಟೆಂಬರ್ ತಿಂಗಳ ಕೊನೆಯ ವಾರದಲ್ಲಿ, ತಾ. 17ರಿಂದ 26ರ ವರೆಗೆ ಮಂಜೇಶ್ವರ ಪೋಲೀಸ್ ಸಬ್ ಇನ್ಸಪೆಕ್ಟರ್ ಶ್ರೀ| ಪಿ. ಬಾಲಕೃಷ್ಣನ್ ನಾಯರ್‌ರವರು ತಮ್ಮ ಸಿಬಂದಿಯೊಂದಿಗೆ ಬಾಯಾರು, ಉಪ್ಪಳ, ಬೇಕೂರು, ಪೈವಳಿಕೆ, ಚಿಪ್ಪಾರು ಮೊದಲಾದೆಡೆಗಳಲ್ಲಿ ಪ್ರೊಹಿಬಿಷನ್ ಧಾಳಿ ನಡೆಸಿ ಸುಮಾರು 1,300 ಗೆಲನ್ ಹುಳಿರಸ ಮತ್ತು 16 ಡ್ರಾಂ ಶರಾಬು ಪತ್ತೆ ಹಚ್ಚಿರುವರು.

ವಿದಾಯ: ಕೇಂದ್ರ ಸರಕಾರದ ಆಕಾಶವಾಣಿ ಮಂತ್ರಿ ಶಾಖೆಯಲ್ಲಿ ಉಪ ಸಂಪಾದಕರಾಗಿ ನೇಮಕಗೊಂಡು ದಿಲ್ಲಿಗೆ ತೆರಳಲಿರುವ ಶ್ರೀ| ಬಿ. ಕೃಷ್ಣಾನಂದ ಹೆಗ್ಡೆಯವರನ್ನು ಬೀಳ್ಕೊಡುವ ಸಮಾರಂಭವು ಕೋಟೇಶ್ವರ ಬೋರ್ಡು ಹೈಸ್ಕೂಲಿನಲ್ಲಿ ಮುಖ್ಯೋಪಾಧ್ಯಾಯ ಶ್ರೀ| ಎ. ಶ್ರೀನಿವಾಸ ಆಚಾರ್ಯರ ಅಧ್ಯಕ್ಷತೆಯಲ್ಲಿ ಜರಗಿತು.

ಕಬಡಿ ಪಂದ್ಯಾಟ: ದ. ಕ. ಜಿಲ್ಲಾ ದಸರಾ ಕಬಡಿ ಪಂದ್ಯಾಟಗಳ ಅಂಗವಾಗಿ ತಾ. 3ರಂದು ಮಂಗಳೂರು ಕೇಂದ್ರ ಮೈದಾನಿನಲ್ಲಿ ಜರಗಿದ ಶಾಲಾ ಕಬಡಿ ಪಂದ್ಯಾಟಗಳಲ್ಲಿ ಬೆಳ್ತಂಗಡಿ ಬೋರ್ಡು ಹೈಸ್ಕೂಲಿನವರು ಜಯಗಳಿಸಿ ಅಕ್ಟೋಬರ್ ತಾ. 8 ಮತ್ತು 9ರಂದು ಮೈಸೂರಲ್ಲಿ ನಡೆಯುವ ಡಿವಿಜನಲ್ ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಪಡೆದಿದೆ.

ಸರಸ್ವತಿ ಕಲಾ ಪ್ರಸಾರಕ ಸಂಘ: ಬಂಟ್ವಾಳ ಸರಸ್ವತಿ ಕಲಾ ಪ್ರಸಾರಕ ಸಂಘದ ಸರ್ವ ಸದಸ್ಯರ ಸಭೆಯು ಕಳೆದ ತಾ. 1ರಂದು ಶ್ರೀ| ಬಿ. ವೆಂಕಟೇಶ ಬಾಳಿಗರ ಅಧ್ಯಕ್ಷತೆಯಲ್ಲಿ ಜರಗಿದಾಗ 1961—62 ವರ್ಷಕ್ಕೆ ಈ ಕೆಳಗಿನ ಕಾರ್ಯಕಾರಿ ಮಂಡಳಿಯು ಆಯ್ಕೆಯಾಗಿದೆ: ಶ್ರೀಗಳಾದ ಬಸ್ತಿ ವಾಮನ ಶೆಣೈ—ಅಧ್ಯಕ್ಷ, ಯು. ಆರ್. ಕಿಣಿ—ಉಪಾಧ್ಯಕ್ಷ, ಪಿ. ಎಸ್. ಕಾಮತ್—ಖಜಾಂಜಿ, ವಸಂತ ಮಾಧವ ಪ್ರಭು—ಕಾರ್ಯದರ್ಶಿ, ಬಿ. ದಾಸ ಕಾಮತ್—ಜೊತೆ ಕಾರ್ಯದರ್ಶಿ.

ಸಂಗೀತ ಕಚೇರಿ: ವಿಲಾಯತ್ ಹುಸೇನ ಖಾನರ ಶಿಷ್ಯ ಶ್ರೀ| ಹನುಮಂತ ರಾವ್ ವಾಳ್ವೇಕರರ ಹಿಂದುಸ್ಥಾನಿ ಸಂಗೀತ ಕಚೇರಿಯೊಂದು ಕಳೆದ ತಾ. 1 ರಂದು ಉಡುಪಿಯಲ್ಲಿ ವಿಕ್ಟೋರಿಯಾ ಜುಬಿಲೀ ಯೂನಿಯನ್ ಕ್ಲಬ್ಬಿನ ಆಶ್ರಯದಲ್ಲಿ ನಡೆಯಿತು.

ಜಿಲ್ಲಾ ಕೃಷಿಕರ ಸಂಘ: ಜಿಲ್ಲೆಯ ರೈತರನ್ನು ಪ್ರತಿನಿಧಿಕರಿಸುವ ಜಿಲ್ಲಾ ಮಟ್ಟದ ಯೋಗ್ಯ ಸಂಘಟನೆಯ ಅಭಾವ ಹೋಗಲಾಡಿಸಲು ಆರಂಭಿಸಲ್ಪಟ್ಟಿರುವ ದ. ಕ. ಜಿಲ್ಲಾ ಕೃಷಿಕರ ಸಂಘದ ಉದ್ಘಾಟನೆಯು, ತಾ. 2ರಂದು ಸಂಜೆ ಜಿಲ್ಲಾ ಕಾಂಗ್ರೆಸ್ ಕಚೇರಿ ವಠಾರದಲ್ಲಿ ಜಿಲ್ಲಾ ಕಾಂಗ್ರೆಸ್ ಕಾರ್ಯದರ್ಶಿ ಶ್ರೀ| ಕೆ. ಸೂರ್ಯನಾರಾಯಣ ಅಡಿಗರ ಅಧ್ಯಕ್ಷತೆಯಲ್ಲಿ ಶ್ರೀ| ಎ. ಶಂಕರ ಆಳ್ವರಿಂದ ನಡೆಯಿತು.

ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯ ಕುರಿತು: ದಕ್ಷಿಣ ಕನ್ನಡ ಜಿಲ್ಲೆಯ ಕಾಂಗ್ರೆಸ್ ಅಭ್ಯರ್ಥಿಗಳ ಆಯ್ಕೆಯ ಕುರಿತಾದ ವಿಚಾರ ವಿನಿಮಯವು ಸೌಹಾರ್ದದ ವಾತಾವರಣದಲ್ಲಿ ನಡೆದಿದೆಯೆಂದೂ ಕೇಂದ್ರ ಪಾರ್ಲಿಮೆಂಟರಿ ಬೋರ್ಡು ಅಂತಿಮ ಯಾದಿ ಪ್ರಕಟಿಸುವುದೆಂದೂ ದ. ಕ. ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರು ಪ್ರಕಟಿಸಿರುವರು.

ಗಾಂಧಿ ಜಯಂತಿ: ಕಳೆದ ತಾ. 2 ರಂದು ಗಾಂಧಿ ಜಯಂತಿ ಹಾಗು ನೈರ್ಮಲ್ಯ ದಿನಾಚರಣೆಯು ಬಾಬುಗುಡ್ಡೆ ಹರಿಜನ ಹಿತಚಿಂತನ ಶಾಲಾ ವಠಾರದಲ್ಲಿ ಮೈಸೂರು ವಿಧಾನ ಪರಿಷತ್ತಿನ ಸದಸ್ಯ ಶ್ರೀ| ಕೆ. ಕೆ. ಸೆಟ್ಟರಿಂದ ಉದ್ಘಾಟಿಸಲ್ಪಟ್ಟಿತು. ಮಂಗಳೂರು ನಗರ ಸಭಾಪತಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು ಸಮಾರಂಭದ ಅಧ್ಯಕ್ಷತೆ ವಹಿಸಿದ್ದರು. ಪಾರ್ಲಿಮೆಂಟ್ ಸದಸ್ಯ ಶ್ರೀ| ಕೆ. ಆರ್. ಆಚಾರರು ಭಾಷಣ ಮಾಡಿದ್ದರು.

ಉಚಿತ ಚಿಕಿತ್ಸೆ: ಮಂಗಳೂರು ಬೋಳಾರದಲ್ಲಿರುವ ಶ್ರೀ ರಾಮಕೃಷ್ಣ ಮಿಶನ್ ಧರ್ಮ ಔಷಧಾಲಯದಲ್ಲಿ ಕಳೆದ ಸಪ್ಟೆಂಬರ್ ತಿಂಗಳಲ್ಲಿ 693 ಹೊಸ ರೋಗಿಗಳೂ 2679 ಹಳೆಯ ರೋಗಿಗಳೂ ಸೇರಿ ಒಟ್ಟು 3372 ಮಂದಿ ಉಚಿತ ಚಿಕಿತ್ಸೆ ಪಡೆದಿರುವರು.

ಮಧ್ಯಾಹ್ನ ಊಟದ ವ್ಯವಸ್ಥೆ: ಮಂಗಳೂರು ಕಾಪಿಕಾಡು ಮುನ್ಸಿಪಲ್ ಶಾಲೆಯಲ್ಲಿ ಕಳೆದ ತಾ. 2ರಂದು ಬೆಳಗ್ಗೆ ಗಾಂಧಿ ಜಯಂತಿ ಆಚರಣೆಯೂ ಮಕ್ಕಳ ಮಧ್ಯಾಹ್ನ ಊಟದ ವ್ಯವಸ್ಥೆಯೂ ಉದ್ಘಾಟನಾ ಸಮಾರಂಭವೂ ನಗರದ ಪ್ರಮುಖ ರಚನಾತ್ಮಕ ಕಾರ್ಯಕರ್ತರಲ್ಲೊಬ್ಬರಾದ ಶ್ರೀ| ಕೆ. ಎಂ ಸುಬ್ರಾಯರ ಅಧ್ಯಕ್ಷತೆಯಲ್ಲಿ ಜರಗಿದುವು. ಮಂಗಳೂರು ನಗರಸಭಾಪತಿ ಶ್ರೀ| ಮಣೇಲ ಶ್ರೀನಿವಾಸ ನಾಯ್ಕರು ಮಧ್ಯಾಹ್ನ ಊಟದ ವ್ಯವಸ್ಥೆಯನ್ನು ಉದ್ಘಾಟಿಸಿದರು.

ವಸಂತ ಪ್ರೇಮಿ ಮಂಡಳಿಯ ದಿನ: ಮಂಗಳೂರು ಬೆಸೆಂಟ್ ರಾಷ್ಟ್ರೀಯ ಬಾಲಿಕಾ ಪಾಠಶಾಲೆಯಲ್ಲಿ ಶಾಲೆಯ ಹಳೇ ವಿದ್ಯಾರ್ಥಿಗಳಿಂದ ವಸಂತ ಪ್ರೇಮಿ ಮಂಡಳ ದಿನವು ತಾ. 2ರಂದು ಸ್ಥಳೀಯ ಸರಕಾರೀ ಕಾಲೇಜಿನ ಹಿಂದಿ ಪ್ರೊಫೆಸರ್ ಶ್ರೀಮತಿ ಎಂ. ರಾಜೀವಿ ಬಾಯಿಯವರ ಅಧ್ಯಕ್ಷತೆಯಲ್ಲಿ ಆಚರಿಸಲ್ಪಟ್ಟಿತು.

ಕ್ಷಯರೋಗ ಮುದ್ರೆ ಮಾರಾಟ ಚಳವಳಿ

ಹನ್ನೆರಡು ವರ್ಷಗಳ ಹಿಂದೆ, ಭಾರತ ಕ್ಷಯರೋಗ ಸಂಸ್ಥೆಯಿಂದ ಆರಂಭಿಸಲ್ಪಟ್ಟ ಕ್ಷಯರೋಗ ಮುದ್ರೆ ಮಾರಾಟ ಚಳವಳಿಯು, ಕ್ಷಯರೋಗವನ್ನು ಹೋರಾಡುವ ಸರಕಾರೇತರ ಯತ್ನಗಳ ದಿಸೆಯಲ್ಲಿ ಬಹುತೇಕ ಯಶಸ್ಸನ್ನು ಸಾಧಿಸಿದೆ. ಈ ಚಳವಳಿಯು ರಾಜ್ಯಗಳ ಕ್ಷಯರೋಗ ಸಂಘಗಳಿಂದ ನಡೆಸಲ್ಪಡುತ್ತಿದೆ. ಈ ಮುದ್ರೆಗಳ ಮಾರಾಟದಿಂದ ಬಂದ ಹಣದಿಂದ, ಕ್ಷಯರೋಗ ನಿವಾರಣಾ ಸಂಬಂಧವಾಗಿ ಜನಸಾಮಾನ್ಯರಲ್ಲಿ ತಿಳುವಳಿಕೆ ಹರಡುವ ಆರೋಗ್ಯ ಶಿಕ್ಷಣವನ್ನು ಹರಡುವುದಕ್ಕೂ, ಕ್ಷಯರೋಗ ವಿರುದ್ಧವಾದ ಕಾರ್ಯಗಳಿಗೆ ನೆರವಾಗಲೂ ಅನುಕೂಲವಾಗಿದೆ. ಈ ಚಳವಳಿಯಿಂದ ಜನತೆಯ ಲಕ್ಷ್ಯವು ಈ ಮಾರಕ ರೋಗದ ಅಪಾಯಗಳ ಕಡೆಗೆ ಸೆಳೆಯಲ್ಪಟ್ಟಿದೆ; ಆಸಕ್ತಿ ಹುಟ್ಟಿಸಿದೆ. ವಣಿಜ ಲೋಕವು ಈ ಚಳವಳಿಯಲ್ಲಿ ತುಂಬ ಸಹಾಯಮಾಡುತ್ತಿದೆ. ಅದರಂತೇ, ಕೇಂದ್ರ ಹಾಗು ರಾಜ್ಯ ಸರಕಾರಗಳೂ, ಕಲ್ಯಾಣ ಸಾಧಕ ಸಂಸ್ಥೆಗಳೂ, ವಿದ್ಯಾರ್ಥಿ ಲೋಕವೂ, ಸಾಮಾಜಿಕ ಕಾರ್ಯಕರ್ತರೂ ಈ ಚಳವಳಿಯಲ್ಲಿ ವಿಶೇಷ ಲಕ್ಷ್ಯವಿತ್ತಿರುವರು.

ರಾಜ್ಯಸರಕಾರಗಳು, ಚಳವಳಿಯಿಂದ ಎತ್ತಲ್ಪಟ್ಟ ನಿಧಿಗಳಿಂದ, ಕ್ಷಯರೋಗಿಗಳ ಚಿಕಿತ್ಸೆಯಲ್ಲಿ ನೆರವಾಗುತ್ತಿವೆ; ಚಿಕಿತ್ಸಾಸೇವೆಯನ್ನು ವಿಸ್ತರಿಸುತ್ತಿವೆ; ಟಿಬಿ ವಾರ್ಡುಗಳಲ್ಲಿ ಹಾಸಿಗೆಗಳ ಸಂಖ್ಯೆ ಹೆಚ್ಚಿಸಲ್ಪಡುತ್ತಿದೆ.

ಹನ್ನೆರಡನೇ ಚಳವಳಿಯು, ಎಂದಿನಂತೆ ಮಹಾತ್ಮಾಜಿಯವರ ಜನ್ಮದಿನೋತ್ಸವವಾದ ಅಕ್ಟೋಬರ ತಾ. 2ರಲ್ಲಿ ಆರಂಭವಾಗಿದ್ದು, 1962ನೇ ಜನವರಿ ತಾ. 26ರಂದು ಕೊನೆಗೊಳ್ಳುವುದು. ಪ್ರತೀ ವರ್ಷ ಕ್ಷಯರೋಗ ಮುದ್ರೆಯ ಚಿತ್ರ ಬದಲಾಯಿಸಲ್ಪಡುತ್ತದೆ. ಜನರು ಈ ಬಾರಿ ಹೆಚ್ಚು ಹೆಚ್ಚು ಮುದ್ರೆಗಳನ್ನು ಕೊಂಡುಕೊಳ್ಳುವರೆಂದಾಶಿಸಲಾಗಿದೆ. ಒಂದು ಕ್ಷಯರೋಗ ಮುದ್ರೆಯ ಬೆಲೆ ಹತ್ತು ನಯಾಪೈಸೆ ಮಾತ್ರ.

"ಕಾಂಗ್ರೆಸ್ ಸಂದೇಶ"

ಮೈಸೂರು ಪ್ರದೇಶ ಕಾಂಗ್ರೆಸ್ ಕಮಿಟಿಯ ವತಿಯಿಂದ, ಗಾಂಧೀಜಯಂತಿಯ ದಿನವಾದ ತಾ. 2—10—61ರಲ್ಲಿ, "ಕಾಂಗ್ರೆಸ್ ಸಂದೇಶ" ಎಂಬ ಹೆಸರಿನ ಸಾಪ್ತಾಹಿಕವು, ಬೆಂಗಳೂರಿನಲ್ಲಿ, ಕಾಂಗ್ರೆಸ್ ಅಧ್ಯಕ್ಷ ಶ್ರೀ| ಎಸ್. ಸಂಜೀವರೆಡ್ಡಿಯವರು ಉದ್ಘಾಟಿಸಿದರು.

ತಂಬಾಕು ಬೆಳೆಯ ಹೆಚ್ಚಳ

1960-61ರಲ್ಲಿ, ಭಾರತದಲ್ಲಿ, ತಂಬಾಕನ್ನು ಬೆಳೆದ ವಿಸ್ತೀರ್ಣ ಮತ್ತು ಪ್ರಮಾಣ ಹೆಚ್ಚಿದೆ. ಆ ವರ್ಷ 968,000 ಎಕ್ರೆ ವಿಸ್ತೀರ್ಣದಲ್ಲಿ 294,000 ಟನ್ ಗಳಷ್ಟು ಹೊಗೆಸೊಪ್ಪು ಬೆಳೆಯಾಗಿದೆ.

ಕಲಾಭವನ, ಮಂಗಳೂರು

ಮಂಗಳೂರು "ಕಲಾಭವನ"ದವರ ಪ್ರಥಮ ಕಾಣಿಕೆ, "ಬಲಿದಾನ" ನಾಟಕವು (ಗುರುದೇವ ಠಾಕೂರರ "ಸೆಕ್ರಿಫ್ಯಾಸ್" ನಾಟಕದ ಭಾಷಾಂತರ) ಇದೇ ತಾ. 14—10—61ನೇ ಶನಿವಾರ ರಾತ್ರೆ 9-30ಕ್ಕೆ, ಮಂಗಳೂರು ಡೊನ್ ಬೊಸ್ಕೊ ನಾಟಕ ಮಂದಿರದಲ್ಲಿ, ಭವನದ ಕಲಾವಿದರಿಂದ ಪ್ರದರ್ಶಿಸಲ್ಪಡುವುದು. ಕನ್ನಡನಾಡಿನ ಸುಪ್ರಸಿದ್ಧ ಸಾಹಿತಿಗಳಾಗಿರುವ ಅ. ನ. ಕೃ. ಅಥವಾ ತ. ರಾ. ಸು. ಅವರು ಈ ಸಮಾರಂಭವನ್ನು ಉದ್ಘಾಟಿಸುವ ನಿರೀಕ್ಷೆಯಿದೆ.

"ಕಲಾಭವನ"ದ ಸದಸ್ಯರೆಲ್ಲರಿಗೆ ಉಚಿತ ಪ್ರವೇಶವಿದೆ. ಇತರರಿಗೆ, ಟಿಕೇಟು ದರಗಳು: ರೂ. 5, 3, 2 ಮತ್ತು 1 ಹೀಗೆ ನಾಲ್ಕು ತರಗತಿಗಳಲ್ಲಿವೆ. ಟಿಕೇಟುಗಳನ್ನು ಮುಂದಾಗಿ ಪಡೆಯಲಿಚ್ಛಿಸುವವರು ಅಥವಾ ಸದಸ್ಯರಾಗಲಿಚ್ಛಿಸುವವರು, (1) ಪ್ರಭಾತ ಆಫೀಸು, ರಥಬೀದಿ, (2) ಶ್ರೀ| ಮಣೇಲ ಕೃಷ್ಣ ನಾಯಕ್, ಬಂದರ. (3) ಸ್ಟುಡಿಯೋ ಬಾಲ್ಕೊ, ಹಂಪನಕಟ್ಟೆ ಮತ್ತು (4) ಕೆನರಾ ಜುವೆಲ್ಲರ್ಸ್, ಹಂಪನಕಟ್ಟೆ—ಇವರಲ್ಲಿ ಯಾರನ್ನಾದರೂ ಸಂದರ್ಶಿಸಬಹುದು.

ಕನ್ಯಾನದಲ್ಲಿ

ಲೋಕಸೇವಾ ತರಬೇತಿ ಶಿಬಿರ

ಲೋಕಸೇವಾ ವೃಂದ (ರಿಜಿಸ್ಟರ್ಡ್), ಅಳಿಕೆ, ಇದರ ವತಿಯಿಂದ ಕನ್ಯಾನ ಬೋರ್ಡು ಹೈಸ್ಕೂಲಿನಲ್ಲಿ, ತಾ. 8—10—61ರಿಂದ ತಾ. 12—10—61 ವರೆಗೆ, ಲೋಕಸೇವಾ ತರಬೇತಿ ಶಿಬಿರವು ನಡೆಸಲ್ಪಡುವುದು. ಶಿಬಿರದ ವೇಳೆ, ಹೈಸ್ಕೂಲಿನ ಕ್ರೀಡಾಂಗಣದ ಬಗ್ಗೆ ಸದಸ್ಯರು ಮತ್ತು ಹಿತಚಿಂತಕರಿಂದ ಶ್ರಮದಾನ, ವಿಚಾರಗೋಷ್ಠಿ, ಸಾರ್ವಜನಿಕ ಉಪನ್ಯಾಸ, ಸಾಮೂಹಿಕ ಪ್ರಾರ್ಥನೆ, ಕವಿತಾವಾಚನ, ಪುರಾಣವಾಚನ, ಪೌರತನ ತರಬೇತಿ ಮತ್ತು ವೈಯಕ್ತಿಕ ನೈತಿಕ ಮತ್ತು ಮಾನಸಿಕ ತರಬೇತಿ ಇತ್ಯಾದಿ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ. ಉಪನ್ಯಾಸಗಳ ವಿವರ ಹೀಗಿದೆ:

ತಾ. 8ರಲ್ಲಿ ಶ್ರೀ| ಪೆರ್ಲ ಕೃಷ್ಣಭಟ್, ವಿದ್ವಾನ್—ಅವರಿಂದ "ಷಡ್ದರ್ಶನಗಳು"; ಶ್ರೀ| ಅಮ್ಮೆಂಬಳ ಶಂಕರನಾರಾಯಣ ನಾವಡ, ವಿದ್ವಾನ್—ಅವರಿಂದ "ಅಧ್ಯಾತ್ಮ ಜೀವನ"; ತಾ. 9ರಲ್ಲಿ ಶ್ರೀ| ಎಸ್. ತಿರುಮಲೇಶ್ವರ ಭಟ್—ವಿದ್ವಾನ್ ಅವರಿಂದ "ಸಮಾಜಸೇವೆಯ ಅವಶ್ಯಕತೆ"; ಶ್ರೀ| ಅಮೀರ್ ಹುಸೇನ್—ಕಾರ್ಯದರ್ಶಿ, ವೆಲ್‌ಫೇರ್ ಸೆಂಟರ್—ಮಂಗಳೂರು ಅವರಿಂದ "ಸಮಾಜಸೇವೆಯ ವಿಧಾನಗಳು"; ತಾ. 10ರಲ್ಲಿ ಶ್ರೀ| ಪಿ. ಕೆ. ನಾರಾಯಣ, ವಿದ್ವಾನ್—ಅವರಿಂದ "ರಾಷ್ಟ್ರಪ್ರೇಮದ ಅವಶ್ಯಕತೆ"; ತಾ. 11 ರಲ್ಲಿ ಡಾ| ಪಿ. ಯಸ್. ಈಶ್ವರ ಭಟ್—ಅವರಿಂದ "ಅಡಿಕೆ ಕೃಷಿ"; ಶ್ರೀ| ಎಚ್. ಶ್ರೀಧರರಾವ್, ಎಂ.ಎ., ಬಿ.ಟಿ.—ಅವರಿಂದ "ಭಾರತದ ಅಭಿವೃದ್ಧಿಯಲ್ಲಿ ಕೃಷಿ".

ಲೇಖಾಂಕ ೮೧೭.

ಶುಕ್ರ ಸ್ವರೂಪ—೩.

(ಎಂ. ಸುಬ್ರಾಯನ್)

ಶುಕ್ರನು ಬಿಳುಪು ವರ್ಣದವನು. ಶುಭ್ರತೇಜಸ್ಸಿನಿಂದ ಮಿರುಗುವನು. ಈತನು ಸಂಧ್ಯಾತಾರೆಯಾಗಿದ್ದು ಹೇಸ್ಪರಸ್ (Hesperus) ಎಂಬ ನಾಮಕರಣಗೊಂಡು ಪ್ರಸಿದ್ಧನಾಗಿರುವನು. ಸಾಯಂಕಾಲ ಸೂರ್ಯನು ಮುಳುಗಿದ ನಂತರ ಈತನು ನಮ್ಮ ಕಣ್ಣಿಗೆ ಗೋಚರಿಸುವನು. ಜನರು ಇವನನ್ನು ಸಂಧ್ಯಾತಾರೆಯೆಂದು ಸಾಧಾರಣವಾಗಿ ಹೇಳುತ್ತಿರುವರು. ಈತನು ಸೂರ್ಯೋದಯದ ಮೊದಲು ಮುಂಜಾವದಲ್ಲಿ ಬೆಳಗಿ ತೋರುವುದರಿಂದ ಲೂಸಿಫರ್ (Lucifer) ಎಂದು ಕರೆಯುತ್ತಿರುವರು. ಈ ನಾಮಕರಣಕೆ ಬೆಳಜಾವದಲ್ಲಿ ಕಂಡುಬರುವುದೇ ಕಾರಣವಾಗಿದೆ. ಈ ಗ್ರಹನ ಮಧ್ಯಮ ಗತಿ 59 ಕಲೆ 8 ವಿಕಲೆಗಳು. ಈತನ ದೈನಿಕ ಗತಿ 62 ಕಲೆ ಇರುತ್ತದೆ. 82 ಕಲೆಗಿಂತ ಮೀರಿ ಎಂದೂ ಹೋಗುವುದಿಲ್ಲ ಅಧಿಕವಾಗಿ 9 ಅಂಶ 2 ಕಲೆ ಶರವುಳ್ಳವನಾಗಿರುವನು. 42 ದಿನ ವಕ್ರಿಯಾಗಿಯೂ ಎರಡು ದಿನ ಸ್ತಂಭಿತನಾಗಿಯೂ ನೆಲಸುವನು. ಈತನ ವರ್ಷಮಾನ 224 ದಿನ 7 ಗಂಟೆಗಳು. ಈತನು ಸ್ತ್ರೀಗ್ರಹನು. ಆದ್ರ ಶೀತಪ್ರಕೃತಿಯು. ರಾತ್ರಿಯಲ್ಲಿಯೇ ಬೆಳಗಿ ಕಾಣುವ ಗ್ರಹನು. ಸಂತೋಷ ಆನಂದ ಉಲ್ಲಾಸಗಳನ್ನು ಈ ಗ್ರಹನುಂಟುಮಾಡಿಸುವನು

ನಮ್ಮ ಪ್ರಾಚೀನರು ಈತನು ಸೂರ್ಯಾಸ್ತಮನಾನಂತರ ಪಶ್ಚಿಮ ಕ್ಷಿತಿಜದಲ್ಲಿ ಎಂಟು ಒಂಭತ್ತನೆಯ ರಾಶಿಯ ಸಾಧಾರಣ ಒಂಭತ್ತು ಗಂಟೆಯ ವರೆಗೆ ಕಂಡುಬರುವನು. ಈತನು ರಜತವರ್ಣನು. ಈ ಕಾಲದಲ್ಲಿ ಅತಿ ತೇಜಸ್ವಿಯಾಗಿ ಕಂಡುಬರುತ್ತಿರುವನು ಈ ತೇಜಸ್ಸು ಜನರನ್ನು ಆಕರ್ಷಿಸುತ್ತಿರುವುದು. ಬೆಳಗ್ಗೆ ಸೂರ್ಯೋದಯದ ಮೊದಲು ಉದಯ ಲಗ್ನದ ಪೂರ್ವರಾಶಿಯಲ್ಲಿರುವನು. ಈ ಸಮಯ ಸಾಮಾನ್ಯವಾಗಿ ಹೊಳೆಯುವನು. ವಿಶೇಷ ಕಾಂತಿಯುಕ್ತನಾಗಿರುವುದಿಲ್ಲ ಎಂದು ಹೇಳಿರುವರು.

ದಧಿಕುಮುದ ಶಶಾಂಕ ಕಾಂತಿಭೃ-
ತ್ಸ್ಫುಟವಿಕಸತ್ಕಿರಣೋ ಬೃಹತ್ತಮುಃ।
ಸುಗತಿರವಿಕೃತೋ ಜಯಾನ್ವಿತ!
ಕೃತಯುಗರೂಪಕರಃ ಸಿತಾಹ್ವಯಃ ॥
(ವರಾಹ ಬೃ. ಸಂಪು 9—ಶ್ಲೋಕ 45(

ವರಾಹನು ಬೃಹತ್ಸಂಹಿತೆಯಲ್ಲಿ ಶುಕ್ರಚಾರಾಧ್ಯಾಯದಲ್ಲಿ ಶುಕ್ರನಿಗೆ ಒಂಭತ್ತು ಬಗೆಯ ವೀಥಿಯ ಸಂಚಾರ ಅವುಗಳಲ್ಲಿ ಸಂಚರಿಸಿದಾಗ ಉಂಟಾಗುವ ಫಲ ಮತ್ತು ಅನ್ಯಗ್ರಹಸಂಯೋಗಾದಿ ಫಲ ವರ್ಣಫಲಗಳನ್ನು ವಿಸ್ತಾರವಾಗಿ ಹೇಳಿರುವನು. ಶುಕ್ರನು ಮೊಸರು, ಕುಮುದ ಪುಷ್ಪ, ಚಂದ್ರಸದೃಶ ಕಾಂತಿಯುಕ್ತನಾಗಿ ಸ್ಫುಟ ಹಾಗೂ ವಿಕಾಸಗೊಂಡ ವಿಸ್ತೀರ್ಣ ದೇಹನೂ ಶೋಭಾನಗತಿಯುಕ್ತನೂ ವಿಕಾರವರ್ಜಿತನೂ ಜಯಯುಕ್ತನೂ ಆಗಿದ್ದರೆ ಲೋಕಕ್ಕೆ ಕೃತಯುಗದ ಶಾಂತಿ ಸುಖ ಧರ್ಮಸುಭಿಕ್ಷಗಳನ್ನು ಕೊಡುವನು ಎಂದು ಮೇಲಿನ ಪದ್ಯದ ಸಾರ.

ವರಾಹನು ನವಗ್ರಹಚಾರ ಫಲ, ತಾರಾಗ್ರಹರ ಅಸ್ತಫಲಗಸನ್ನು ಬೇರೆ ಬೇರೆಯಾಗಿ ಬೃಹತ್ಸಂಹಿತೆಯಲ್ಲಿ ಹೇಳಿರುವನು,

ಚತುರ್ದಶೀಂ ಪಂಚದಶೀಂ ತಥಾಷ್ಟಮೀಂ
ತಮಿಸ್ರ ಪಕ್ಷಸ್ಯತಿಥಿಂ ಭೃಗೋಃಸುತಃ।
ಯದಾ ವ್ರಜೇದ್ದರ್ಶನಮಸ್ತ ಮೇತಿ ವಾ
ತದಾ ಮಹೀ ವಾರಿಮಯೀವ ಲಕ್ಷ್ಯತೇ॥
(ಬೃ. ಸಂ. 9 ಅ. 36 ಶ್ಲೋ.)

ಶುಕ್ರನು ಕೃಷ್ಣಪಕ್ಷದ ಚತುರ್ದಶಿ, ಅಮಾವಾಸ್ಯೆ, ಅಥವಾ ಅಷ್ಟಮಿಗಳಲ್ಲಿ ಅಸ್ತ ಅಥವಾ ಉದಯಗೊಂಡರೆ ಅತಿವೃಷ್ಟಿಯಾಗುವುದು ಎಂದು ಸಾರ. ಈಗ ನಡೆಯುತ್ತಿರುವ ಪ್ಲವ ಸಂವತ್ಸರದ ಮಳೆ ಅಧಿಕ ಸ್ಥಿತಿಗೆ ವರಾಹನ ಈ ಮಾತು ಸರಿಯಾಗಿ ಅನ್ವಯಿಸುತ್ತದೆ. ಸತ್ಯವಾಗಿಯೇ ಎಲ್ಲರಿಗೂ ಅನುಭವಾತ್ಮಕವಾಗಿ ಮಳೆ ಎಲ್ಲೆಡೆಯಲ್ಲೂ ಬಂದಿದೆ. ಮಳೆಗೆ ಅಷ್ಟಗ್ರಹಯೋಗ ಕಾರಣವಲ್ಲ. ಆ ವಿಚಾರದಲ್ಲಿ ಬೇರೆಯೇ ವಾಚಕರಿಗೆ ಪುಸ್ತಕರೂಪದಲ್ಲಿ ಗೋಚರ ಫಲ ಬೋಧನಾ ಕ್ರಮದೊಂದಿಗೆ ಕೊಡಬೇಕೆಂದು ಶ್ರಮಿಸಲಾಗುತ್ತಿದೆ.

ವರಾಹನು ಹೋರೆಯಲ್ಲಿ "ಸಿತಶ್ಚ ಮದನಃ" ಶುಕ್ರನು ಕಾಮಕಾರಕನು. "ಸೂರಿದಾನವ ಪೂಜಿತಶ್ಚ ಸಚಿವಾ" ಗುರುಶುಕ್ರರು ಸಚಿವಕಾರಕರು "ಶುಕ್ರಃ ಶ್ಯಾಮಃ" ಶುಕ್ರನು ಶ್ಯಾಮಲವರ್ಣನು "ಚಿತ್ರಾಸಿತಾ" ಶುಕ್ರನು ವಿಚಿತ್ರವರ್ಣನು ಶಯನಸ್ಥಾನದವನು. "ವಸ್ತ್ರಂ ದೃಢಂ" ದೃಢವಾದ ಬಟ್ಟೆಯವನು; ಮುತ್ತು ಶುಕ್ರನ ಧಾತು; ವಸಂತಋತು. "ಆಮ್ಲ" ಹುಳಿರಸ; ವೀರ್ಯಧಾತು; ಪುಷ್ಪವೃಕ್ಷಣ; ಜಲಭೂತದವನು ಎಂದೂ ಹೇಳಿರುವನು.

ಕಲ್ಯಾಣವರ್ಮನು ಸಾರಾವಲಿಯಲ್ಲಿ "ಆಗ್ನೇಯ ಶುಕ್ರಾಃ" ಅಗ್ನೆಯ ದಿಕ್ಕು. "ಶುಕ್ರ ಕ್ರಸೌಮ್ಯ" ಶುಕ್ರನು ಶುಭಗ್ರಹ, ಶಚೀದೇವತೆ, ಸ್ತ್ರೀಗ್ರಹ, ಬ್ರಾಹ್ಮಣ, ಜಾತಿ, ಯಜುರ್ವೇದಾಧಿಪತಿ, ಪಿತೃಲೋಕ, ಚತುರ್ಥಸ್ಥಾನದದಲ್ಲಿ ಬಲಿ, ಸ್ತ್ರೀಕ್ಷೇತ್ರದಲ್ಲಿ ಬಲಿಯು ಅರ್ಧರಾತ್ರಿಯ ಕಾಲಬಲಿ ಎಂದು ಹೇಳಿರುವನು.

ಪರಾಶರನು ಜಲಭೂತ ರಜೋಗುಣ, ಮಧುರರುಚಿ, ಹೂವಿನ ಮರಗಳ ಕಾರಕ ಎಂದು ಮೊದಲಾಗಿ ಹೇಳಿರುವನು. ವೈದ್ಯನಾಥನು ಶುಕ್ರನು "ಸಿತಾಂಗಃ" ಬಿಳುಪಾದ ಶರೀರದವನು; ಶಿರೋದಯದವನು; ದ್ವಿಪಾದ ಗ್ರಹನು; ಜಲಾಶಯ ಸ್ಥಾನ "ಷೋಡಷ ವತ್ಸರಃ ಸಿತಃ" ಶುಕ್ರನು ಹದಿನಾರು ವಯಸ್ಸಿನವನು. "ಶಾಖಾಧಿಪಃ ಸಿತಃ" ವೇದಶಾಖಾಧಿಪತಿ ಶುಕ್ರ, ಕರ್ಬುರ ವರ್ಣ, ವಜ್ರರತ್ನ, ಕೃಷ್ಣಾನದಿಯಿಂದ ಗೌತಮಿ ನದಿಯ ವರೆಗಿನ ಸ್ಥಾನ, ಶುಕ್ಲಪಕ್ಷ, ಕಠೋರವೀಕ್ಷಣೆಯವ, ಲಘುಸ್ವಭಾವ, ವಕ್ರಬುದ್ಧಿಯವ, ಕಾಮಕಾರಕ "ಅರಿಷ್ಟದೋಸ್ರೇಕಿಲ ಜಾತಕೇಷು" ಏಳರ ಶುಕ್ರನು ಎಲ್ಲಾ ಜಾತಕಗಳಲ್ಲೂ ಅರಿಷ್ಟ ಫಲವನ್ನೇ ಕೊಡುವವನು. "ಸೋಮೇನ ಸಿತಃ" ಚಂದ್ರನಿಂದ ಶುಕ್ರನು ಪರಾಜಿತನಾಗುವನು.

ಸ್ವೋಚ್ಚ!ಸ್ವವರ್ಗ ದಿವಸೇ ಯದಿ ರಾಶಿ ಮಧ್ಯೇ
ಶತ್ರುಪ್ರಮಯಾನುಜ ಗೃಹೇಹಿಬುಕೇಽ ಪರಾಹ್ನೇ।
ಯುದ್ಧೇ ಚ ಶೀತಕರ ಸಂಗಮ ವಕ್ರಚಾರೇ
ಶುಕ್ರೋರುಣಸ್ಯ ಪುರತೋಯದಿ ಶೋಭ ನಸ್ಯಾತ್ ॥

ತನ್ನ ಉಚ್ಚಕ್ಷೇತ್ರ, ತನ್ನ ವರ್ಗ, ದಿನ, ರಾಶಿಗಳಲ್ಲೂ. ರಾಶಿ ಮಧ್ಯದಲ್ಲಿಯೂ, ಷಷ್ಠ, ದ್ವಾದಶ, ತೃತೀಯ ಮತ್ತು ಚತುರ್ಥಗಳಲ್ಲಿಯೂ, ಅಪರಾಹ್ನದಲ್ಲಿಯೂ, ಯುದ್ಧದಲ್ಲಿಯೂ. ಚಂದ್ರನೊಡನೆ ಸೇರಿದಾಗಲೂ, ವಕ್ರಗತಿಯಲ್ಲೂ, ಸೂರ್ಯನ ಮುಂದೆ ಇದ್ದಾಗಲೂ ಶುಕ್ರನು ಶುಭಫಲವನ್ನು ಕೊಡುವನು. "ಭೃಗುಃ ಷಷ್ಠೇ ವಿಫಲಃ" ಆರರ ಶುಕ್ರನು ನಿಷ್ಫಲನು ಎಂದೂ ಹೇಳಿರುತ್ತಾನೆ.

"ಪೂರ್ವ ವಕ್ತ್ರಃ" ಪೂರ್ವ ಮುಖದವ. "ಶುಕ್ರಃ ವೈಶ್ಯಃ" ಶುಕ್ರ ವೈಶ್ಯ ಜಾತಿಯವ. ಶುಕ್ರನು ಮಧ್ಯವಯಸ್ಸಿನವ ಎಂದು ಜಯದೇವನು ಹೇಳಿರುವನು.

ಫಲದೀಪಿಕಾಕಾರನು ನೃತ್ಯಶಾಲೆ, ದೇವತೆ, ಲಕ್ಷ್ಮಿ, ಕೀಕಟ ದೇಶ, ಏಳು ವರುಷ, ಬೆಳ್ಳಿ ಲೋಹ ಎಂದು ಮೊದಲಾಗಿ ಹೇಳಿರುವನು.

ಶಂಭು ಹೋರಾಕಾರನು ಅತಿ ಬಿಳಿಯ ರೂಪದವನು. ಮಧುರರಸದವನು, ಶಚಿದೇವತೆ, ಮಧ್ಯ ವಯಸ್ಸು ಎಂದು ಮೊದಲಾಗಿ ವರ್ಣಿಸಿರುವನು.

—— [ಸಶೇಷ]

ಮೈಸೂರಿನಲ್ಲಿ ಪೂರ್ಣ ಪಾನನಿರೋಧ

ಮೈಸೂರು ರಾಜ್ಯದಲ್ಲಿ ಪಾನನಿರೋಧವು ಜ್ಯಾರಿಯಲ್ಲಿರದ ಜಿಲ್ಲೆಗಳ ಪೈಕಿ, ಈ ವರ್ಷದ ಆರಂಭದಲ್ಲಿ ಮೈಸೂರು ಜಿಲ್ಲೆಯಲ್ಲಿ ಅದನ್ನು ಜಾರಿಗೆ ತರಲಾಗಿತ್ತು. ಇನ್ನು ಈ ರಾಜ್ಯದಲ್ಲಿ ಗುಲ್ಬರ್ಗ, ರಾಯಚೂರು ಮತ್ತು ಬೆಂಗಳೂರು—ಈ ಮೂರು ಜಿಲ್ಲೆಗಳುಳಿದಿವೆ. ಈ ಮೂರರಲ್ಲೂ, ತೃತೀಯ ಪಂಚವಾರ್ಷಿಕ ಯೋಜನಾವಧಿಯಲ್ಲಿ ಪಾನನಿರೋಧವನ್ನು ಜಾರಿಗೆ ತರಲಾಗುವುದೆಂದು ತಿಳಿಯಲಾಗಿದೆ. ಇದರಿಂದ ರಾಜ್ಯಸರಕಾರದ ಆಯದಲ್ಲಿ ಮೂರುಕೋಟಿ ರೂಪಾಯಿಗಳಷ್ಟು ನಷ್ಟವಾಗುವುದನ್ನು ಕೇಂದ್ರ ಸರಕಾರವು ತುಂಬಿಕೊಡುವಂತೆ ಕೇಳಿಕೊಳ್ಳಲಾಗುವುದು.

——

ಈ ವಾರದ ಭವಿಷ್ಯ

ಶ್ರೀ ಎಸ್. ಸುಬ್ರಾಯನ್,
ಸಾಹಿತ್ಯ ಮತ್ತು ಜೋತಿಷ್ಯ ಶಿರೋಮಣಿ.
ತಾರೀಕು ೮—೧೦—೧೯೬೧ರಿಂದ
ತಾ. ೧೪—೧೦—೧೯೬೧ರ ವರೆಗೆ.

ಮೇಷ: ಹೊಸ ಎಣಿಕೆಯಿಂದ ಕೂಡಿದವರಾಗಿದ್ದು ಅವನ್ನು ಸಾಧಿಸಲಿರುವ ಯತ್ನಯುಕ್ತರಾಗುವಿರಿ. ನವೀನ ಸಮಸ್ಯೆಗಳು ನಿಮ್ಮ ಮುಂದೆ ಇರುವವಾದರೂ ಅವುಗಳಲ್ಲಿ ನೀವು ಯಶಸ್ವಿಗಳಾಗುವಿರಿ. ದೂರಗತ ಬಂಧುಜನರ ಭೇಟಿಯನ್ನು ಹೊಂದಲಿರುವ ಯೋಗವಿದೆ.

ವೃಷಭ: ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಂಡುಬರುವರು. ಸಂಪತ್ತಿನಿಂದ ಪ್ರಗತಿಗಿರುವ ದಾರಿಯುಳ್ಳವರಾಗುವಿರಿ. ಹಿರಿಯರ ಆರೋಗ್ಯದ ನೆಲೆಯು ಉತ್ತಮವಾಗಿರುವುದಿಲ್ಲ. ವಿದ್ಯಾಜೀವನದವರು ಉನ್ನತಿಯುಳ್ಳವರಾಗುವರು.

ಮಿಥುನ: ಸಾಮುದಾಯಿಕ ವಿಷಯಗಳಲ್ಲಿ ಆಸಕ್ತಿಯುಳ್ಳವರಾಗಿ ಕಂಡುಬರುವಿರಿ. ಸಂಪತ್ತಿನಿಂದ ಅಭಿವೃದ್ಧಿಗಿರುವ ಮಾರ್ಗಗಳನ್ನು ಹೊಂದುವಿರಿ. ದೂರ ಪ್ರಯಾಣಾಸಕ್ತಿಯು ಕಂಡುಬರುವುದು. ನೌಕರರಿಗೆ ಪ್ರಗತಿಕರ.

ಕರ್ಕಟಕ: ನಿರಂತರ ಕೆಲಸಗಳಿಂದ ಕೂಡಿದ್ದು ವಿರಾಮ ಕಡಮೆಯಾಗಿರುವುದು. ಬಂಧುಜನರ ವಿಯೋಗವನ್ನು ಹೊಂದಲಿಗುವಿರಿ. ವಾಸಸ್ಥಾನದ ಬದಲಾವಣೆಯ ಕಡೆಗೆ ಗಮನಯುಕ್ತರಾಗಿ ಕಂಡುಬರುವಿರಿ. ನೌಕರರು ಸ್ಥಾನಾಂತರವನ್ನು ಹೊಂದಲಿರುವ ಯೋಗವಿದೆ.

ಸಿಂಹ: ಸಾಮಾಜಿಕದಲ್ಲಿ ಉತ್ತಮಸ್ಥಾನಮಾನಯುತರಾಗಿ ಕಂಡುಬರುವಿರಿ. ಶುಭಕೆಲಸಗಳು ನಡೆಯಲಿರುತ್ತವೆ. ಪ್ರಯಾಣವನ್ನು ಮಾಡಲಿರುವ ಯೋಗಯುಕ್ತರಾಗಿರುವಿರಿ. ನೌಕರರು ಸ್ಥಾನಾಂತರವನ್ನು ಹೊಂದಲಿರುವ ಯೋಗವಿದೆ.



ವಾರದ ಪ್ರಭಾತ ಪಂಚಾಂಗ

(ಕನ್ಯಾ, ಭಾದ್ರಪದ-ಬಹುಳ)

ತಾರೀಕು	ವಾರ	ತಿಥಿ		ನಿತ್ಯ ನಕ್ಷತ್ರ	ಯೋಗ	ಕರಣ	ವಿಷ	ಅಮೃತ	ಮಹಾನಕ್ಷತ್ರ
		ಸೌರ	ಚಾಂದ್ರ						
8	ರವಿ	೨೨	ಚ ೪೧।	ಉ ೪೨	ಬ್ರ ೪೨||	ಭ ೮|||	೦	೨೨	ಹಸ್ತಾ ೪೯
9	ಚಂದ್ರ	೨೩	ಅ ೪೫	ಹ ೪೭	ಐ ೪೮|||	ಚ ೧೩।	೪|||	೩೦||	೫೩||
10	ಕುಜ	೨೪	ಆಶ್ವೀಜ ಶುದ್ಧ ಪಾ ೪೬|||	ಚಿ ೫೧	ವೈ ೪೮।	ಕಿಂ ೧೬।	೮||	೩೪	೫೮
11	ಬುಧ	೨೫	ಬಿ ೪೯।	ಸ್ವಾ ೫೪	ವಿ ೪೬||	ಬಾ ೧೮||	೫|||	೩೧	ಚಿ ೨।
12	ಗುರು	೨೬	ತ ೪೯।	ವಿ ೫೫|||	ಪ್ರೀ ೪೪।	ಕೈ ೧೯।	೮||	೩೩।	೭
13	ಶುಕ್ರ	೨೭	ಚೌ ೪೯	ಅ ೫೬|||	ಆ ೪೧	ವ ೧೯।	೬	೩೦||	೧೧।
14	ಶನಿ	೨೮	ಪಂ ೪೭।	ಜ್ಯೇ ೫೬|||	ಸೌ ೩೭	ಬ ೧೮	೧೦|||	೩೪|||	೧೬

ತಾ 9 ಸೋಮವಾರ ಮಹಾಲಯ ಅಮಾವಾಸ್ಯೆ, ತಾ. 10—10—61ರಂದು ನವರಾತ್ರ್ಯಾರಂಭ.

ಕನ್ಯಾ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮ ಕಡಮೆಯಾಗಿರುತ್ತದೆ. ಸಂಪತ್ತಿನಿಂದ ಅಭಿವೃದ್ಧಿಗಿರುವ ಯೋಗಯುಕ್ತರಾಗಿರುವಿರಿ. ಆತ್ಮೀಯರ ಅಗಲುವಿಕೆಯನ್ನು ಹೊಂದಲಿರುವಿರಿ. ದೂರ ಪ್ರಯಾಣವನ್ನು ಮಾಡಲಿರುವಿರಿ.

ತುಲಾ: ಮನಸ್ಸು ಶಾಂತಿಯಿಂದ ಕೂಡಿರುವುದಿಲ್ಲ. ಹೊಸ ಕೆಲಸಗಳಿಗೆ ಕೈಯನ್ನು ನೀಡಿದವರಾಗಿ ಕಂಡುಬರುವಿರಿ. ಧಾರ್ಮಿಕ ವಿಷಯದಲ್ಲಿ ಆಸಕ್ತಿ ಬಹಳವಾಗಿರುತ್ತದೆ. ಕೋರ್ಟು ವ್ಯವಹಾರಗಳು ಮುಂದುವರಿಯುವವು.

ವೃಶ್ಚಿಕ: ಹೊಸ ಘಟನೆಯಿಂದ ಕೂಡಿದವರಾಗಿ ಕಂಡುಬರುವಿರಿ. ಸಂಪತ್ತಿನಿಂದ ಪ್ರಗತಿಗಿರುವ ನೆಲೆಯು ಕಂಡುಬರುವುದು. ದೂರಗತ ಬಂಧುಜನರ ಭೇಟಿಯು ಸಂಭವಿಸಲಿರುತ್ತದೆ. ನೌಕರರು ಪ್ರಗತಿಯಿಂದ ಕೂಡಿದವರಾಗಿರುವರು. ಪ್ರಯಾಣವಿದೆ.

ಧನು: ಮಾನಸಿಕ ಶಾಂತಿಯಿಂದ ಕೂಡಿರುವುದಿಲ್ಲ. ಹೊಸ ಕೆಲಸಗಳಿಗೆ ಕೈಯನ್ನು ನೀಡಿದವರಾಗಿ ಕಂಡುಬರುವಿರಿ. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ಪತ್ರವ್ಯವಹಾರಗಳು ಬಹಳವಾಗಿ ನಡೆಯಲಿರುತ್ತವೆ.

ಮಕರ: ನಿಮ್ಮವರೇ ನಿಮಗೆ ವಿರೋಧಿಗಳಾಗಿ ಕಂಡುಬರುವರು. ಕಂಡುಬರುವರು. ಕುಟುಂಬದಲ್ಲಿ ಶುಭಕೆಲಸಗಳು ನಡೆಯಲಿರುತ್ತವೆ. ಸಂಪತ್ತಿನಿಂದ ಅಭಿವೃದ್ಧಿಗಿರುವ ಸಂಘಟನೆಯೂ ಕಾರ್ಯಗಳಲ್ಲಿ ಜಯವೂ ಉಂಟಾಗಲಿರುವ ಯೋಗಯುಕ್ತರಾಗಿರುವಿರಿ.

ಕುಂಭ: ನಿರಂತರ ಕೆಲಸಗಳಿಂದ ಕೂಡಿದವರಾಗಿದ್ದು ವಿರಾಮಯುಕ್ತರಾಗುವುದಿಲ್ಲ. ಬಂಧುಜನರ ವಿಯೋಗವನ್ನು ಹೊಂದಲಿರುವಿರಿ ದೇಹಾರೋಗ್ಯ ವಿಷಯದಲ್ಲಿ ಜಾಗರೂಕತೆಯಿಂದ ಕೂಡಿದವರಾಗಿರಿ ವಿದ್ಯಾಜೀವನದವರಿಗೆ ಪ್ರಗತಿಕರ.

ಮೀನ: ಹೊಸ ಕೆಲಸಗಳನ್ನು ಸಾಧಿಸಲಿರುವಿರಿ. ಮಿತ್ರರ ಭೇಟಿ ಸಹಾಯಗಳುಂಟಾಗಲಿರುತ್ತವೆ. ವಾಗ್ವಾದಗಳು ಸಂಭವಿಸದಂತೆ ಜಾಗರೂಕರಾಗಿರಬೇಕು. ದೇಹಾರೋಗ್ಯದ ನೆಲೆಯು ಚೆನ್ನಾಗಿರುವುದಿಲ್ಲ. ಪ್ರಯಾಣವನ್ನು ಮಾಡಲಿರುವಿರಿ

——

ಠಾಕೂರ್ ಶತಮಾನೋತ್ಸವದ ಸಮಾರಂಭಗಳು

ಗುರುದೇವ ರವೀಂದ್ರನಾಥ ಠಾಕೂರರ ಶತಮಾನೋತ್ಸವ ಸಮಾರಂಭಗಳ ಎರಡನೆಯ ಘಟ್ಟ ಇದೇ ಬರುವ ನವೆಂಬರ ತಿಂಗಳಲ್ಲಿ ಪ್ರಾರಂಭವಾಗಲಿದೆ. ನವೆಂಬರ 11ರಿಂದ 14ರ ವರೆಗೆ ಸಾಹಿತ್ಯ ಎಕೆಡೆಮಿ ಮತ್ತು ಭಾರತೀಯ ಸಾಂಸ್ಕೃತಿಕ ಸಮಾರಂಭಗಳ ಪರಿಷತ್ತು ಒಟ್ಟು ಸೇರಿ ಅಂತರರಾಷ್ಟ್ರೀಯ ಸಾಹಿತ್ಯ ಗೋಷ್ಠಿಯೊಂದನ್ನು ಏರ್ಪಡಿಸಿದೆ. ಶತಮಾನೋತ್ಸವ ಸಮಾರಂಭಗಳ ಅಂಗವಾಗಿ ರಾಜ್ಯ ಸರಕಾರಗಳು ಠಾಕೂರ್ ಸ್ಮಾರಕ ನಾಟಕ ಮಂದಿರಗಳನ್ನೂ ನಿರ್ಮಿಸುತ್ತಿವೆ. ಈ ನಾಟಕ ಮಂದಿರಗಳ ಪ್ರಾರಂಭದ ದಿನ ಠಾಕೂರರ ನಾಟಕಗಳನ್ನು ಅಭಿನಯಿಸಲಾಗುವುದು.

——

ಈ ವರ್ಷದಿಂದ ಐ. ಎ. ಎಸ್. ಪರೀಕ್ಷೆಗೆ ಹಿಂದಿಯನ್ನು ಒಂದು ಐಚ್ಛಿಕ ವಿಷಯವನ್ನಾಗಿ ಪರಿಗಣಿಸಲಾಗಿದೆ.

——

ಸಂಸ್ಕೃತ ಲೋಕೋಕ್ತಿಗಳು

ಸಂಗ್ರಾಹಕ:
ವೈದ್ಯಗುರು ಎಂ. ಆರ್. ಭಟ್.

363 ಅತಿಕಾಮಾದ್ ದಶಗ್ರೀವಃ ನಷ್ಟಃ

ಅತ್ಯಂತ ಕಾಮದಿಂದ ರಾವಣನು ನಷ್ಟನಾದನು.

364 ಅತಿ ಲೋಭಾತ್ ಸುಯೋಧನಃ

ಅತಿ ಲೋಭದಿಂದ ದುರ್ಯೋಧನನು ನಷ್ಟನಾದನು.

365 ಅತಿ ದಾನಾದ್ ಬಲಿರ್ನಷ್ಟಃ

ಅತಿ ದಾನದಿಂದ ಬಲಿಚಕ್ರವರ್ತಿಯು ನಷ್ಟನಾದನು.

366 ಅತಿಃ ಸರ್ವತ್ರ ವರ್ಜಯೇತ್

ಅತಿಯಾಗಿ ಯಾವುದನ್ನೂ ಮಾಡಬಾರದು; ಇದು ವರ್ಜ್ಯ.

367 ನಾಸ್ತಿ ಕಾಮ ಸಮೋ ವ್ಯಾಧಿಃ ನಾಸ್ತಿ ಮೋಹ ಸಮೋ ರಿಪುಃ

ಕಾಮಕ್ಕೆ ಸಮಾನವಾದ ವ್ಯಾಧಿಯು ಬೇರೆ ಇಲ್ಲ; ಮೋಹಕ್ಕೆ ಸಮಾನವಾದ ಶತ್ರುವು ಬೇರೆ ಇಲ್ಲ.

368 ನಾಸ್ತಿ ಕ್ರೋಧ ಸಮೋ ವಹ್ನಿಃ ನಾಸ್ತಿ ಜ್ಞಾನ ಸಮಂ ಸುಖಮ್

ಕ್ರೋಧಕ್ಕೆ ಸಮಾನವಾದ ಅಗ್ನಿಯು ಬೇರೆ ಇಲ್ಲ; ಜ್ಞಾನಕ್ಕೆ ಸಮಾನವಾದ ಸುಖ ಬೇರೆ ಇಲ್ಲ.

369 ನದೀನಾಂ ಚ ನಖೀನಾಂ ಚ ವಿಶ್ವಾಸೋ ನೈವ ಕರ್ತವ್ಯಃ

ನದಿಗಳಲ್ಲಿ ಹಾಗೂ ಉಗುರುಗಳು ಪ್ರಧಾನವಾಗಿದ್ದ ಪ್ರಾಣಿಗಳಲ್ಲಿ ವಿಶ್ವಾಸವನ್ನು ಮಾಡಬಾರದು.

370 ಶೃಂಗಿಣಾಂ ಶಸ್ತ್ರಪಾಣಿನಾಂ ವಿಶ್ವಾಸೋ ನೈವ ಕರ್ತವ್ಯಃ

ಕೋಡುಗಳು ಪ್ರಧಾನವಾಗಿದ್ದ ಪ್ರಾಣಿಗಳಲ್ಲಿ ಹಾಗೂ ಶಸ್ತ್ರಧಾರಿಗಳಲ್ಲಿ ವಿಶ್ವಾಸಮಾಡಬಾರದು.

371 ಸ್ತ್ರೀಷು ರಾಜಕುಲೇಷು ಚ ವಿಶ್ವಾಸೋ ನೈವ್ಯ ಕರ್ತವ್ಯಃ

ಸ್ತ್ರೀಯರಲ್ಲಿ ಹಾಗೂ ರಾಜಕುಲದವರಲ್ಲಿ ವಿಶ್ವಾಸಮಾಡಬೇಡ.

372 ಏಕಾಕಿನಾ ತಪೋದ್ವಾಭ್ಯಾಂ ಪಠನಂ ಗಾಯನಂ ತ್ರಿಭಿಃ

ಒಬ್ಬನಾಗಿಯೇ ತಪಸ್ಸುಮಾಡಬೇಕು; ಇಬ್ಬರಾಗಿ ಕಲಿಯಬೇಕು; ಮೂವರಾಗಿ ಗಾಯನಮಾಡಬೇಕು.

373 ಚತುರ್ಭಿರ್ಗಮನಂ ಕ್ಷೇತ್ರಂಃ ಪಂಚಭಿರ್ಬಹುಭೀ ರಣಮ್

ನಾಲ್ಕು ಮಂದಿಯಾಗಿ ನಡೆಯಬೇಕು; ಐದು ಜನರಿದ್ದು ಕೃಷಿಮಾಡಬೇಕು; ಬಹುಜನರಿದ್ದು ಜಗಳಕ್ಕೆ ಹೋಗಬೇಕು.

374 ಅಸ್ಪೃಹೋ ನಾಧಿಕಾರಿ ಸ್ಯಾನ್ನಾ ಕಾಮೋ ಮಂಡನ ಪ್ರಿಯಃ

ದ್ರವ್ಯಾಪೇಕ್ಷೆ ಇಲ್ಲದವನು ವ್ಯಾಪಾರವನ್ನು ಮಾಡಲಾರನು; ಕಾಮವಿಲ್ಲದವನು ಅಲಂಕಾರಮಾಡಿಕೊಳ್ಳಲಾರನು.

375 ನಾವಿದಗ್ಧಃ ಪ್ರಿಯಂ ಬ್ರೂಯಾತ್ ಸ್ಫುಟವಕ್ತಾ ನ ವಂಚಕಃ

ಪಂಡಿತನಲ್ಲದವನು ಪ್ರಿಯ ಮಾತಾಡುವುದಿಲ್ಲ; ಯಥಾರ್ಥ ಮಾತಾಡುವವನು ವಂಚನೆಮಾಡುವುದಿಲ್ಲ.

376 ಮೂರ್ಖಾಣಾಂ ಪಂಡಿತಾ ದ್ವೇಷ್ಯಾಃ ದರಿದ್ರಾಣಾಂ ಮಹಾಧನಾಃ । ವರಾಂಗನಾ ಕುಲಸ್ತ್ರೀಣಾಂ ಸುಭಗಾನಾಂ ಚ ದುರ್ಭಗಾಃ

ಮೂರ್ಖರಿಗೆ ಪಂಡಿತರಲ್ಲಿ ದ್ವೇಷ; ದರಿದ್ರರಿಗೆ ಧನಿಕರಲ್ಲಿ ದ್ವೇಷ; ಕುಲಸ್ತ್ರೀಯರಿಗೆ ವರಾಂಗನೆಯರಲ್ಲಿ ದ್ವೇಷ; ರೂಪವಂತರಿಗೆ ಕುರೂಪಿಯರಲ್ಲಿ ದ್ವೇಷ.

377 ನ ದಂಪತ್ಯೋಃ ಕ್ವಚಿತ್ ಕಲಹಃ ತತ್ರ ಲಕ್ಷ್ಮೀಃ ಸ್ಥಿರಾ ಭವೇತ್

ಗಂಡಹೆಂಡತಿಯರಿಗೆ ಕಲಹವಿರದಿದ್ದಲ್ಲಿ, ಲಕ್ಷ್ಮೀ ದೇವಿಯು ಸ್ಥಿರವಾಗಿ ಇರುವಳು.

378 ಸತ್ಯಂ ವದ ಧರ್ಮಂ ಚರ

ಸತ್ಯವನ್ನೇ ನುಡಿಯು; ಧರ್ಮವನ್ನೇ ಆಚರಿಸು.

379 ಕ್ರೀಡಾ ಸಮಯೇ ಅಸತ್ಯಂ ವಚನಂ ಅಪಾತಕಮ್

ಚೇಷ್ಟೆಗಾಗಿ ಆಟದ ಸಮಯದಲ್ಲಿ ಆಡಿದ ಸುಳ್ಳು ಪಾತಕವೆನಿಸದು.

380 ಸ್ತ್ರೀಭಿಃ ಸಹ ಉತ್ತಂ ಅಸತ್ಯಂ ವಚನಂ ಅಪಾತಕಮ್

ಚೇಷ್ಟೆಗಾಗಿ ಹೆಂಗಸರೊಡನೆ ಆಡಿದ ಸುಳ್ಳು ಪಾತಕವಲ್ಲ.

381 ವಿವಾಹ ಕಾಲೇ ಪ್ರೋಕ್ತಂ ಅಸತ್ಯ ವಚನಂ ಅಪಾತಕಮ್

ವಿವಾಹ ಕಾಲದಲ್ಲಿ ಚೇಷ್ಟೆಗಾಗಿ ಹೇಳಿದ ಸುಳ್ಳು ಪಾತಕವಲ್ಲ

382 ಪ್ರಾಣಾತ್ಯಯೇ ಸರ್ವಧನಾಪಹಾರೇಚ ಪ್ರೋಕ್ತಂ ಅಸತ್ಯ ವಚನಂ ಅಪಾತಕಮ್

ಪ್ರಾಣ ಹೋಗುವ ಸಮಯದಲ್ಲಿ ಹಾಗೂ ಸಮಸ್ತ ಸಂಪತ್ತನ್ನು ಕಳಕೊಂಡಾಗ, ಆಡಿದ ಸುಳ್ಳು ಪಾತಕವೆನಿಸದು.

383 ಯದ್ಭೂತ್ ಹಿತಮತ್ಯಂತಂ ಏತತ್ ಸತ್ಯಂ ಸನಾತನಮ್

ಸಮಸ್ತ ಪ್ರಾಣಿಗಳಿಗೆ ಹಿತವಾದದ್ದೇ ಸತ್ಯವೆಂದು ತಿಳಿಯಬೇಕು.

384 ವಾಚ್ಯಾರ್ಥಾಃ ನಿಯತಾಃ ಸರ್ವೇ ವಾಙ್ಮೂಲಾ ವಾಗ್ವಿನಿಃಸೃತಾ

ಮಾನವನ ವ್ಯವಹಾರಗಳೆಲ್ಲ ವಾಣಿಯಿಂದಲೇ ಉಂಟಾಗುತ್ತವೆ

385 ತಾಂತು ಯಃಸ್ತೇನಯೇದ್ವಾಚಂ ಸ ಸರ್ವಸ್ತೇಯಕೃನ್ನರಃ

ಸತ್ಯವನ್ನು ಬದಿಗಿರಿಸಿ, ಅಸತ್ಯವನ್ನು ಆಡುವಾತನು ಕದಿಯುವ ಕಳ್ಳನಿಗಿಂತ ದೊಡ್ಡ ಕಳ್ಳನು.

386 ನ ಜಾತು ಕಾಮಃ ಕಾಮಾನಾಂ ಉಪಭೋಗೇನ ಶಾಮ್ಯತಿ

ವಿಷಯ ಸುಖವನ್ನು ಭೋಗಿಸಿದ ನಂತರ ತ್ಯಜಿಸುವುದು ಅಸಾಧ್ಯವೇ. ಸರಿ ವಿಷಯಾಸಕ್ತಿಯು ಹೆಚ್ಚುತ್ತ ಬರುವುದು.

387 ಹವಿಷಾ ಕಷ್ಣವರ್ತ್ಮೇವ ಭೂಯ ಏವಾಭಿವರ್ಧತೇ

ಹಾಗೆಯೇ ಹವನ ದ್ರವ್ಯಗಳಿಂದ ಅಗ್ನಿಯು ವಿಶೇಷವಾಗಿ ಪ್ರಜ್ವಲಿಸುತ್ತ ಹೋಗುತ್ತದೆ.

388 ಏತಾವಾನೇ ವ ಪುರುಷೋ ಯದನುರ್ಷೀ ಯದಕ್ಷಮಿ

ಅನ್ಯಾಯ ಕಂಡಾಗ, ಸಿಟ್ಟು ಬರುವ ಹಾಗೂ ಅಪಮಾನ ಸಹಿಸಲಾರದ ಮಾನವನೇ ನಿಜವಾದ ಪುರುಷನು.

389 ಉಪಾಧ್ಯಾಯಾತ್ ದಶಾಚಾರ್ಯಃ ಆಚಾರ್ಯಾಣಾಂ ಶತಂ ಪಿತಾ

ಹತ್ತು ಜನ ಉಪಾಧ್ಯಾಯರಿಗಿಂತ ಆಚಾರ್ಯನು ಶ್ರೇಷ್ಠನು; ನೂರು ಜನ ಆಚಾರ್ಯರಿಗಿಂತ, ಪಿತನು ಶ್ರೇಷ್ಠನು.

390 ಸಹಸ್ರಂ ತು ಪಿತೃನ್ ಮಾತಾ ಗೌರವೇಣಾತಿ ಆಚ್ಯತೇ

ಪಿತನಿಗಿಂತ ಸಾವಿರ ಪಾಲು ಮಾತೆಯು ದೊಡ್ಡವಳು.

391 ಗುರೋರಪ್ಯವಲಿಪ್ತಸ್ಯ ತ್ಯಾಗ ಏವ ಪ್ರದೀಯತೇ

ಸ್ವೇಚ್ಛಾಚಾರಿಯಾದ ಹಾಗೂ ದುರ್ಮಾರ್ಗಗಾಮಿಯಾದ ಗುರುವನ್ನು ಪರಿತ್ಯಜಿಸತಕ್ಕದ್ದು.

392 ವಿವೇಕೀ ಸರ್ವದಾಮುಕ್ತಃ

ಸದಸದ್ವಿವೇಕಿಯು ಜನಕಮಹಾರಾಜನಂತೆ ಯಾವಾಗಲೂ ಜೀವನ್ಮುಕ್ತನು.

393 ಧನೇನ್ ಬಲವಾನ್ ಲೋಕೇ ಸರ್ವಃ ಸರ್ವತ್ರ ಜಾಯತೇ

ಲೋಕದಲ್ಲಿರುವ ಎಲ್ಲಾ ಕಡೆಗಳಲ್ಲಿಯೂ ಎಲ್ಲರೂ ದ್ರವ್ಯದಿಂದಲೇ ಬಲಿಷ್ಠರಾಗುತ್ತಾರೆ.

394 ಪುಣ್ಯಕೃತ್ ಸುಖಮಾಪ್ನೋತಿ ಪಾಪಕೃತ್ ದುಃಖಮಶ್ನುತೇ

ಪುಣ್ಯಮಾಡಿದವನು ಸುಖ ಹೊಂದುತ್ತಾನೆ; ಪಾಪಮಾಡಿದವನು ದುಃಖವನ್ನು ಅನುಭವಿಸುತ್ತಾನೆ.

395 ಯುಧಿಷ್ಠಿರಃ ಸುಖಂಪ್ರಾಪ್ತಃ ನಾಶಂಪ್ರಾಪ್ತಃ ಸುಯೋಧನಃ

ಯುಧಿಷ್ಠಿರನು ಸುಖವನ್ನು ಅಂತ್ಯದಲ್ಲಿ ಹೊಂದಿದನು; ದುರ್ಯೋಧನನಿಗೆ ಸರ್ವನಾಶವಾಯಿತು. (ಸಶೇಷ)

—

ದಸರ, ದೀಪಾವಳಿ, ಕ್ರಿಸ್‌ಮಸ್ ರಜಾದಿನಗಳಲ್ಲಿ ರೈಲ್ವೆ ರಿಯಾಯಿತಿ

ಹಿಂದಿನ ವರ್ಷಗಳಂತೆ ಈ ವರ್ಷವೂ ದಸರ, ದೀಪಾವಳಿ ಮತ್ತು ಕ್ರಿಸ್‌ಮಸ್ ರಜಾದಿನಗಳಲ್ಲಿ ರಿಯಾಯಿತಿ ದರದ ರಿಟರ್ನ್ ಟಿಕೆಟ್‌ಗಳನ್ನು ಕೊಡಬೇಕೆಂಬುದಾಗಿ ರೈಲ್ವೇ ಬೋರ್ಡಿನವರು ನಿರ್ಧರಿಸಿದ್ದಾರೆ. ರಿಯಾಯಿತಿ ದರದ ಟಿಕೆಟ್‌ಗಳನ್ನು ಮೊದಲನೆಯ, ಎರಡನೆಯ ಹಾಗೂ ಮೂರನೆಯ ತರಗತಿಗಳಲ್ಲಿ ಪ್ರಯಾಣ ಮಾಡಿದಾಗ ಕೊಡಲಾಗುವುದು. ಒಂದು ಪ್ರಯಾಣಕ್ಕೆ ವಿಧಿಸುವ ಟಿಕೆಟ್ ದರದ ಒಂದೂ ಮುಕ್ಕಾಲರಷ್ಟನ್ನು ಮಾತ್ರ ರಿಟರ್ನ್ ಟಿಕೆಟ್‌ಗಳನ್ನು ಪಡೆಯಲು ಕೊಡಬೇಕಾಗುವುದು.

ದಸರ ರಜಾ ದಿನಗಳಿಗಾಗಿ ಅಕ್ಟೋಬರ್ 6ರಿಂದ ಅಕ್ಟೋಬರ್ 19ರ ವರೆಗೂ ದೀಪಾವಳಿ ರಜಾದಿನಗಳಿಗಾಗಿ ಅಕ್ಟೋಬರ್ 27ರಿಂದ ನವೆಂಬರ್ 9ರ ವರೆಗೂ ಕ್ರಿಸ್‌ಮಸ್ ರಜಾದಿನಗಳಿಗಾಗಿ 1961ರ ಡಿಸೆಂಬರ್ 15ರಿಂದ 1962ರ ಜನವರಿ 5ರ ವರೆಗೂ ರಿಟರ್ನ್ ಟಿಕೆಟ್‌ಗಳನ್ನು ಕೊಡಲಾಗುವುದು. ಆದರೆ, ಈ ರಿಯಾಯಿತಿಯನ್ನು ಪಡೆಯಲು ಎರಡು ರೈಲ್ವೆ ನಿಲ್ದಾಣಗಳ ಅಂತರವು ಕನಿಷ್ಠ ಪಕ್ಷ 240 ಕಿಲೋ ಮೀಟರುಗಳಷ್ಟಾದರೂ ಇರಬೇಕು.

ರಿಟರ್ನ್ ಟಿಕೆಟ್‌ಗಳನ್ನು ಬಳಸಿಕೊಳ್ಳಲು 15 ದಿನಗಳ ಕಾಲಾವಕಾಶ ಮಾತ್ರವಿರುವುದು. ಪ್ರಯಾಣವನ್ನು ಆರಂಭಿಸಿದ ಮಧ್ಯರಾತ್ರಿಯಿಂದ ಈ ಕಾಲಾವಧಿಯನ್ನು ಲೆಕ್ಕಾಚಾರ ಮಾಡಲಾಗುವುದು. ವಾಪಸ್ಸು ಹೊರಟಾಗ ಪ್ರಯಾಣಿಕರ ಬಳಿ ಟಿಕೆಟ್ಟಿನ 'ರಿಟರ್ನ್ ಹಾಫ್' ಇದ್ದೇ ತೀರಬೇಕು.

—

ಉಳ್ಳಾಲದಲ್ಲಿ ಗಾಂಧಿ ಜಯಂತಿ ದಿನಾಚರಣೆ

ಉಳ್ಳಾಲ ಮೊಗವೀರ ಹಾಯರ್ ಎಲಿಮೆಂಟರಿ ಶಾಲೆಯಲ್ಲಿ 'ಗಾಂಧಿ ಜಯಂತಿ ದಿನಾಚರಣೆ'ಯನ್ನು ಉಳ್ಳಾಲ ಟೌನು ಪಂಚಾಯತ ಬೋರ್ಡ್ ಸದಸ್ಯರಾದ ಶ್ರೀ। ಗೋವರ್ಧನ ಆರ್. ಕೋಟ್ಯಾನರ ಅಧ್ಯಕ್ಷತೆಯಲ್ಲಿ ಆಚರಿಸಲಾಯಿತು.

ಕೋಟೆಕಾರು ಗ್ರಾಮ ಸೇವಕರಾದ ಶ್ರೀ। ಕೆ. ಅಬ್ದುಲ್ಲ ಅಜೀಜರು ಧ್ವಜಾರೋಹಣಮಾಡಿದರು. ನೆರೆದ ಸಭಿಕರಲ್ಲಿ ಶ್ರೀ।ಗಳಾದ ತುಕಾರಾಮ ಅಮೀನ್, ಚಂದ್ರಶೇಖರ ಸುವರ್ಣ, ದಾಸು ಅಮೀನ್, ಅಬ್ದುಲ್ಲ ಅಜೀಜ್, ಯು. ಶೇಷಪ್ಪ ಪುತ್ರನ್, ಕೆ. ಕುಂಞಪ್ಪ ಪೂಜಾರಿಯವರು ಮಹಾತ್ಮಾ ಗಾಂಧೀಜಿಯವರ ಜೀವನದ ಆದರ್ಶಗಳ ಬಗ್ಗೆ ವಿಚಾರಪೂರಿತ ಭಾಷಣಮಾಡಿದರು. ಶಾಲಾ ಮುಖ್ಯೋಪಾಧ್ಯಾಯ ಶ್ರೀ। ಬಿ. ಗೋಪಾಲಕೃಷ್ಣ ಸುವರ್ಣರು ಧನ್ಯವಾದಗೈದರು. ಮಕ್ಕಳಿಗೆ ಸಿಹಿತಿಂಡಿಯನ್ನು ಹಂಚಲಾಯಿತು.

—

Printed at The Prabhat Printers, Ltd., Mangalore and Edited & Published at Prabhat Office, Car Street, Mangalore by K.V.Shenoy.